ದೆಹಲಿ ಕರ್ನಾಟಕ ಸಂಘದ

# ಅಭಿಮತ

ಜುಲೈ 2020
ಬೆಲೆ ರೂ. 1




## ಕನ್ನಡ ಸಾಹಿತ್ಯದ ಗಟ್ಟಿ ಮಹಿಳಾ ದನಿ

## ಡಾ. ಗೀತಾ ನಾಗಭೂಷಣ ನೆನಪು




ದೆಹಲಿ ಕರ್ನಾಟಕ ಸಂಘದ 'ವಿಶಿಷ್ಟ ಕನ್ನಡಿಗ' ಪ್ರಶಸ್ತಿ ಪ್ರದಾನ ಸಮಾರಂಭ (1995). ಪ್ರಶಸ್ತಿ ವಿಜೇತ ಡಾ. ಎನ್. ಶೇಷಗಿರಿ, ಶ್ರೀ ಮ್ಯಾಕ್ಸ್‌ವೆಲ್ ಫೆರೇರಾ, ಶ್ರೀ ಪಿ.ವಿ. ಇಂದಿರೇಶನ್ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ದಿ. ಐ. ರಾಮಮೋಹನ ರಾವ್, ಪ್ರಧಾನ ಕಾರ್ಯದರ್ಶಿ ಎಸ್.ಜಿ. ಹೆಗಡೆ ಮತ್ತು ಮುಖ್ಯ ಅತಿಥಿ ದಿ. ಗೋಪಾಲ ಶಾಸ್ತ್ರಿ ಅವರೊಂದಿಗೆ ಇರುವ ಚಿತ್ರ.



ಹೆಗಡೆ ಅವರೊಂದಿಗೆ ಹೆಗಡೆ!. ಕರ್ನಾಟಕದ ಮಾಜಿ ಮುಖ್ಯಮಂತ್ರಿ ದಿ. ರಾಮಕೃಷ್ಣ ಹೆಗಡೆ ಅವರೊಂದಿಗೆ ಸಂಘದ ಹಾಲಿ ಅಧ್ಯಕ್ಷ ಹಾಗೂ ಮಾಜಿ ಪ್ರಧಾನ ಕಾರ್ಯದರ್ಶಿ ಡಾ. ವೆಂಕಟಾಚಲ ಹೆಗಡೆ. ರಾಮಕೃಷ್ಣ ಹೆಗಡೆ ಅವರು ಕೇಂದ್ರ ವಾಣಿಜ್ಯ ಸಚಿವರಾಗಿದ್ದ ಸಂದರ್ಭ ಸಂಘಕ್ಕೆ ಭೇಟಿ ನೀಡಿದ ಕ್ಷಣಗಳು (1998).

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಪ್ರಧಾನ ಸಂಪಾದಕ
ಡಾ. ಅವನೀಂದ್ರನಾಥ್ ರಾವ್

ಸಂಪಾದಕ ಮಂಡಳಿ ಸದಸ್ಯರು
ಚಂದ್ರಶೇಖರ ಜೋಳದರಾಶಿ
ಎಸ್. ಕುಮಾರ್
ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

ಅಧ್ಯಕ್ಷ
ಡಾ. ವೆಂಕಟಾಚಲ ಜಿ. ಹೆಗಡೆ

ಉಪಾಧ್ಯಕ್ಷರು
ಡಾ. ಅವನೀಂದ್ರನಾಥ್ ರಾವ್
ಜಮುನಾ ಸಿ. ಮಠದ

ಪ್ರಧಾನ ಕಾರ್ಯದರ್ಶಿ
ಸಿ.ಎಂ. ನಾಗರಾಜ

ಕೋಶಾಧಿಕಾರಿ
ಆಶಾಲತಾ ಎಂ.

ಜಂಟಿ ಕಾರ್ಯದರ್ಶಿಗಳು
ರಾಧಾಕೃಷ್ಣ
ಪೂಜಾ ರಾವ್

ಸಮಿತಿ ಸದಸ್ಯರು
ಡಾ. ಎಂ.ಎಸ್. ಶಶಿಕುಮಾರ್
ಶಿವಾನಂದ ಎಸ್. ಇಂಗಳೇಶ್ವರ
ಶ್ರೀನಾಥ್ ಎನ್.ಆರ್
ಸವಿತಾ ನೆಲ್ಲಿ
ಶಿವಪ್ಪ ಎಂ.
ಸಂತೋಷ ಜೆ.
ಶೋಭಾ ಗೌಡ
ಸುಮಿತಾ ಮುರಗೋಡ
ಆರ್. ರೇಣುಕುಮಾರ್
ಟಿ.ಎಂ. ಮೈಲಾರಪ್ಪ

ಕಾವಲು ಸಮಿತಿ
ಪಿ.ಎಸ್. ಶೆಟ್ಟಿ
ನಂದಿನಿ ಮಲ್ಯ
ಈಶ್ವರ ಮಡಿವಾಳ

ಸಂಪುಟ 30 । ಸಂಚಿಕೆ 10
ಜುಲೈ 2020

# ಸಂಪಾದಕೀಯ

## ಜನಸಂಖ್ಯೆಯಲ್ಲಿ ಸಮತೋಲನ ಇಂದಿನ ಅಗತ್ಯ

ಸ್ವತಂತ್ರ ಭಾರತದಲ್ಲಿ ದೇಶದ ಜನಸಂಖ್ಯೆ ಮುನ್ನೂರ ಐವತ್ತು ಮಿಲಿಯನ್ ಇತ್ತು. ಆಗಲೂ ಭಾರತ ಜಗತ್ತಿನ ಅತಿ ಹೆಚ್ಚು ಜನಸಂಖ್ಯೆ ಇರುವ ದೇಶವಾಗಿತ್ತು. ಕಳೆದ ವರ್ಷ ಅದರ ಸಂಖ್ಯೆ 1.37 ಬಿಲಿಯನ್‌ಗೆ ಏರಿತ್ತು. ಈ ನಡುವೆ ಭಾರತದ ರಾಜಕೀಯ ನೇತಾರರು ಈಚೆಗೆ ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದ ಹಾಗೆ ಕಾಯಿದೆಯನ್ನು ರೂಪಿಸುವಂತೆ ಹಲವು ಬಾರಿ ಆಗ್ರಹಿಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರಕಿದ ನಂತರ ಇಲ್ಲಿಯವರೆಗೆ ಲೋಕಸಭಾ ಸದಸ್ಯರು ಸುಮಾರು ಮೂವತ್ತೈದು ಖಾಸಗಿ ಮಸೂದೆಯನ್ನು ಮಂಡಿಸಿದ್ದಾರೆ. ಹಿಂದೆ ಲೋಕಸಭಾ ಸದಸ್ಯರಾಗಿದ್ದ ಈಗಿನ ಕೇಂದ್ರ ಸಂಸ್ಕೃತಿ ಸಚಿವ ಪ್ರಹ್ಲಾದ್ ಸಿಂಗ್ ಪಟೇಲ್ ಅವರು ಇಂತಹದೇ ಮಸೂದೆಯನ್ನು ಮಂಡಿಸಿದ್ದರು. ಎರಡು ವರ್ಷಗಳ ಹಿಂದೆ ನೂರ ಇಪ್ಪತ್ತೈದು ಲೋಕಸಭಾ ಸದಸ್ಯರು ಭಾರತದಲ್ಲಿ ಎರಡು ಮಕ್ಕಳಿಗೆ ಸೀಮಿತಗೊಳಿಸುವ ಕುಟುಂಬ ಯೋಜನಾ ನೀತಿಯನ್ನು ತರುವಂತೆ ರಾಷ್ಟ್ರಪತಿಗಳಿಗೆ ಮನವಿ ಮಾಡಿದ್ದರು.

ಜನಸಂಖ್ಯಾ ನಿಯಂತ್ರಣ ಕಾಯಿದೆಯನ್ನು ಭಾರತದಲ್ಲಿ ತರುವ ಅಗತ್ಯವಿದೆಯೇ? ಎಂಬ ಬಗೆಗೆ ಈಗಾಗಲೇ ಅನೇಕ ಚರ್ಚೆಗಳು ನಡೆದಿವೆ. ಈ ಕುರಿತು ಭಿನ್ನ ಅಭಿಪ್ರಾಯಗಳು ಇವೆ.

ನಾಲ್ಕು ದಶಕಗಳ ಹಿಂದೆ ಚೀನಾ ದೇಶದಲ್ಲಿ ಒಂದು ಮಗುವಿಗೆ ಸೀಮಿತಗೊಳಿಸುವ ಕುಟುಂಬ ಯೋಜನಾ ನೀತಿಯನ್ನು ಹೇರಲಾಗಿತ್ತು. ಅದರ ಪರಿಣಾಮವಾಗಿ ಲಿಂಗಾಧಾರಿತ ಪ್ರಸವ, ಗರ್ಭಧಾರಣೆ ಹೊಂದುವಲ್ಲಿ ಫಲವಂತಿಕೆಯ ಕೊರತೆ, ಶ್ರಮಿಕ ಕಾರ್ಮಿಕರಿಗೆ ಬೇಡಿಕೆ ಮತ್ತು ಆರ್ಥಿಕ ಮುಗ್ಗಟ್ಟಿನಂತಹ ಸಮಸ್ಯೆಗಳನ್ನು ಆ ದೇಶ ಎದುರಿಸಬೇಕಾಯಿತು. ಒಂದೊಮ್ಮೆ ಭಾರತದಲ್ಲೂ ಈ ಬಗೆಯ ಕಾಯಿದೆಗಳನ್ನು ತಂದರೆ ಸಮಸ್ಯೆಗಳನ್ನು ಎದುರಿಸಬೇಕಾಗಬಹುದು.



ಜನಸಂಖ್ಯಾ ನಿಯಂತ್ರಣಕ್ಕೆ ಸಂಬಂಧಿಸಿದಂತೆ ಭಾರತದಲ್ಲಿ ಹೊಸ ವಿದ್ಯಮಾನಗಳು ನಡೆದಿದೆ. ಎರಡು ವರ್ಷಗಳ ಹಿಂದೆ ಅಸ್ಸಾಂ ರಾಜ್ಯ ಸರಕಾರವು ಜನಸಂಖ್ಯೆ ಮತ್ತು ಮಹಿಳಾ ಸಬಲೀಕರಣ ನೀತಿಯನ್ನು ಜಾರಿಗೊಳಿಸಿತು. ಅದರಂತೆ ಮುಂದಿನ ವರ್ಷದಿಂದ ಅಲ್ಲಿ ಇಬ್ಬರು ಮಕ್ಕಳಿಗಿಂತ ಹೆಚ್ಚು ಮಕ್ಕಳನ್ನು ಹೊಂದಿದ್ದರೆ ಅಂತವರಿಗೆ ಸರಕಾರಿ ನೌಕರಿಗೆ ಅರ್ಜಿ ಸಲ್ಲಿಸಲು ಅರ್ಹತೆ ಸಿಗಲಾರದು. ಕೆಲವು ರಾಜ್ಯಗಳಲ್ಲಿ ಅಲ್ಲಿನ ಸರಕಾರಗಳು ಸ್ಥಳೀಯ ಗ್ರಾಮ ಪಂಚಾಯಿತಿಗಳಿಗೆ ಸ್ಪರ್ಧಿಸಲು ಅವಕಾಶ ನಿರಾಕರಿಸುವ ನಿಯಾಮವಳಿಗಳನ್ನು ರೂಪಿಸಿದೆ.

ವಿಶ್ವದ ಜನಸಂಖ್ಯೆಗೆ ಭಾರತದ ಪಾಲು ಶೇಕಡಾ ಹದಿನಾರು ಆಗಿದೆ. ದಶಕದ ಬಳಿಕ ಭಾರತದ ಜನಸಂಖ್ಯೆ 1.5 ಬಿಲಿಯನ್‌ಗೆ ತಲುಪಬಹುದು ಎಂದು ಅಂದಾಜಿಸಲಾಗಿದೆ. ಜನಸಂಖ್ಯೆಯ ಹೆಚ್ಚಳ ಪರಿಸರದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ ಎಂಬುವುದರಲ್ಲಿ ಅನುಮಾನವಿಲ್ಲ. ಅಲ್ಲದೆ ಜೈವಿಕ ವಿಜ್ಞಾನಿಗಳು ಮಾನವ ಜೀವಿಗಳ ಸಂಖ್ಯೆಯಲ್ಲಿ ಹೆಚ್ಚಳವಾಗುವುದರಿಂದ ಇತರ ಕೆಲವು ಜೀವಿಗಳು ಕಣ್ಮರೆಯಾಗಬಹುದು ಎಂಬ ಎಚ್ಚರಿಕೆಯನ್ನೂ ನೀಡಿದ್ದಾರೆ.

ಪ್ರತಿ ವರ್ಷ ಜುಲೈ 11ರಂದು ವಿಶ್ವ ಜನಸಂಖ್ಯಾ ದಿನವನ್ನು ಜಗತ್ತಿನಾದ್ಯಂತ ಆಚರಿಸಲಾಗುತ್ತಿದೆ. ಈ ಸಂದರ್ಭದಲ್ಲಿ ಜನಸಂಖ್ಯಾ ನಿಯಂತ್ರಣದ ಬಗೆಗೆ ಸರಕಾರ ಸೂಕ್ತ ಮುನ್ನೆಚ್ಚರಿಕೆ ಕ್ರಮಗಳನ್ನು ತರಬೇಕಿದೆ. ಮಾನವ ಜನಾಂಗದ ಉಳಿವಿಗೆ ನೆಲ ಮತ್ತು ಜಲ ಮುಖ್ಯ. ಜನಸಂಖ್ಯೆಯ ಹೆಚ್ಚಳದಿಂದ ನೆಲಕ್ಕೆ ಒತ್ತಡವಾಗುತ್ತದೆ. ನೆಲಕ್ಕೆ ಹಾನಿಯಾಗದಂತೆ, ನಮ್ಮ ಸಂಪನ್ಮೂಲಗಳಿಗೆ ಸರಿ ಹೊಂದುವಂತೆ ಜನಸಂಖ್ಯೆಯಲ್ಲಿ ಸಮತೋಲನ ತರುವುದು ಇಂದಿನ ಅಗತ್ಯ.

ಡಾ. ಅವನೀಂದ್ರನಾಥ್ ರಾವ್

ಅಭಿಮತ
ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 30 ಸಂಚಿಕೆ 10
ಜುಲೈ 2020, ಬೆಲೆ ರೂ. 1

**ನಮ್ಮನಮ್ಮೊಳಗೆ**

# ದೆಹಲಿ ಕೊರೊನಾ ಡೈರಿ

ದೆಹಲಿಯಲ್ಲಿ ಕೊರೊನಾ ಹಾವಳಿ ಈಗ ಒಂದು ಬಗೆಯ ತಹಬದಿಗೆ ಬಂದಂತೆ ತೋರುತ್ತಿದೆ. ಆದರೆ, ಅದರ ದೇಶದ ತುಂಬೆಲ್ಲಾ ನಾಗಲೋಟಕ್ಕೆ ಇನ್ನೂ ಕರಾರುವಕ್ಕಾಗಿ ತಡೆಯೊಡ್ಡಲು ಸಾಧ್ಯವಾಗುತ್ತಿಲ್ಲ. ಸುಮಾರು ಎಂಟು ಲಕ್ಷವನ್ನು ಮೀರಿ ಅದು ತನ್ನ ಓಟವನ್ನು ಮುಂದುವರಿಸಿದೆ. ದೆಹಲಿಯಲ್ಲಿ ಸುಮಾರು ಲಕ್ಷಕ್ಕೂ ಮೀರಿ ಕೊರೊನಾ ಕೇಸುಗಳು ದಾಖಲಾಗಿವೆ. ದಿನೇ ದಿನೇ ಸುಮಾರು ಮೂರು ಸಾವಿರ ಕೇಸುಗಳು ಈಗ ದಾಖಲಾಗುತ್ತಿವೆ. ಕೊರೊನಾದ ಈ ಕರಾಳ ನರ್ತನ ಈಗ ದಕ್ಷಿಣದ ರಾಜ್ಯಗಳಲ್ಲಿ, ಅದರಲ್ಲೂ ಕರ್ನಾಟಕದಲ್ಲಿ (ಮುಖ್ಯವಾಗಿ ಬೆಂಗಳೂರಿನಲ್ಲಿ) ಕಳೆದ ಕೆಲ ದಿನಗಳಿಂದ ನಡೆಯುತ್ತಿದೆ. ಕೆಲವು ವರದಿಗಳ ಪ್ರಕಾರ ಮುಂಬರುವ ದಿನಗಳಲ್ಲಿ ಈ ಸಂಖ್ಯೆ ಪರಕಾಷ್ಠೆಯನ್ನು ಮುಟ್ಟುವ ಸಾಧ್ಯತೆಗಳಿವೆ. ಈಗಾಗಲೆ ಒಂದು ದಿನದಲ್ಲಿ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚಿನ ಕೊರೊನಾ ಪೀಡಿತರು ಅದಕ್ಕೆ ಪಕ್ಕಾಗುತ್ತಿದ್ದಾರೆ. ಈಗ ಮೂರು–ನಾಲ್ಕು ದಿನಗಳಲ್ಲೇ ನಾವು ಲಕ್ಷಲಕ್ಷಗಳ ಗಡಿಯನ್ನು ದಾಟುತ್ತಿದ್ದೇವೆ. ಈ ಎಲ್ಲ ಗೊಂದಲಗಳಲ್ಲಿ ದೇಶದ ತುಂಬೆಲ್ಲಾ ಜನಜೀವನ ಲಾಕ್‌ಡೌನ್‌ನಿಂದಾಗಿ ಅಲ್ಲೋಲಕಲ್ಲೋಲವಾಗುತ್ತಿದೆ.

ದೆಹಲಿಯಲ್ಲಿ ಲಾಕ್‌ಡೌನ್‌ನ್ನು ಸಾಕಷ್ಟು ಸಡಿಲಗೊಳಿಸಲಾಗಿದೆ. ಆದರೂ ಜನಜೀವನ ಇನ್ನೂ ಪೂರ್ಣವಾದ ರೀತಿಯಲ್ಲಿ ಮಾಮೂಲಿನ ಸ್ಥಿತಿಗೆ ಮರಳುವಂತೆ ತೋರುತ್ತಿಲ್ಲ. ಕೇಂದ್ರ ಮತ್ತು ದೆಹಲಿ ರಾಜ್ಯದ ಸರಕಾರಿ ಕಚೇರಿಗಳು ಹೇಗೂ ತಮ್ಮ ಕೆಲಸದಲ್ಲಿ ತೊಡಗಿಕೊಂಡಿವೆ. ದೆಹಲಿಯಲ್ಲಿರುವ ಸುಮಾರು ಮೂವತ್ತರಿಂದ ನಲವತ್ತು ಶೇಕಡಾವಾರಿನ ಸರಕಾರಿ ನೌಕರರು ತಮ್ಮ ಕೆಲಸದಲ್ಲಿ ತೊಡಗಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರೆ, ಇನ್ನುಳಿದ ಖಾಸಗಿ ವಲಯಗಳ ಕೆಲಸಗಾರರು ತಮ್ಮತ್ತ ಬರಲಿರುವ ಗ್ರಾಹಕರಿಗಾಗಿ ಇನ್ನೂ ಕಾಯುತ್ತ ಕುಳಿತಿದ್ದಾರೆ. ಅಲ್ಲೊಂದು ಇಲ್ಲೊಂದು ದೆಹಲಿ ಸರಕಾರಿ ಬಸ್ಸುಗಳು ಹತ್ತಾರು ಪ್ರಯಾಣಿಕರನ್ನು ಏರಿಸಿಕೊಂಡು ಓಡಾಡುವುದು ಗೋಚರಿಸುತ್ತದೆ. ಶಾಲಾ ಕಾಲೇಜುಗಳು ಮತ್ತು ವಿಶ್ವವಿದ್ಯಾಲಗಳು ಮುಚ್ಚಿವೆ. ಜಾಲತಾಣಗಳ ಮೂಲಕ ತರಗತಿಗಳನ್ನು ಮತ್ತು ಪರೀಕ್ಷೆಗಳನ್ನು ಮುಗಿಸುವ ಪ್ರಯತ್ನದಲ್ಲಿರುವ ದೆಹಲಿಯ ಹತ್ತಾರು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥಾನಗಳು ಈಗ ದಿನನಿತ್ಯದ ವೆಬ್‌ನಾರ್‌ನ ಮೂಲಕ ತಮ್ಮ ಗೋಷ್ಠಿಗಳನ್ನು ನಡೆಸುವ ನಿರಂತರ ಪ್ರಯತ್ನ ನಡೆಸುತ್ತಿವೆ. ಜುಲೈನಿಂದ ಶಾಲೆಗೆ ಹೊರಡುವ ಮತ್ತು ತಮ್ಮ ತಮ್ಮ ಆಪ್ತ ಸ್ನೇಹಿತರನ್ನು ಕಾಣುವ ತವಕದಲ್ಲಿದ್ದ ಮಕ್ಕಳೆಲ್ಲ ಇನ್ನೂ ತಮ್ಮತಮ್ಮ ಮನೆಯಲ್ಲೇ ಜಾಲತಾಣದ ತರಗತಿಗಳ ಬಂಧಿಗಳಾಗಿ ಹಪಹಪಿಸುತ್ತಿದ್ದಾರೆ. ಅಂಗಡಿ ಮುಗ್ಗಟ್ಟುಗಳ ಮುಂದೆ, ಮಾಲ್‌ಗಳ ಹಿಂದೆ ಮುಂದೆ ಜನಜಂಗುಳಿ ಇಂಗಿ ಹೋಗಿದೆ. ದೆಹಲಿಯ ಮತ್ತು ಅದರ ಅಕ್ಕಪಕ್ಕದ ಗುರುಗಾಂವ್, ನೊಯಿಡಾ, ಫರಿದಾಬಾದ್‌ಗಳಿಗೆ ಹಬ್ಬಿದ ಮೆಟ್ರೊ ರೈಲು ಕಳೆದ ಮೂರು ತಿಂಗಳುಗಳಿಂದ ಸಂಪೂರ್ಣ ತಟಸ್ಥವಾಗಿದೆ. ದೆಹಲಿಗೆ ಈ ಎಲ್ಲ ಪಕ್ಕದ ರಾಜ್ಯಗಳ ಉಪನಗರಗಳಿಂದ ಕೆಲಸಕ್ಕೆ ಬರಬೇಕೆನ್ನುವವರಿಗೆ ಮತ್ತು ದೆಹಲಿಯಿಂದ ಅಲ್ಲಿಗೆಲ್ಲ ಕೆಲಸಕ್ಕೆ ಹೋಗಬೇಕೆನ್ನುವವರಿಗೆ ಆಯಾಯ ರಾಜ್ಯಗಳ ಲಾಕ್‌ಡೌನ್ ಪಟಗಳನ್ನು ಗಮನದಲ್ಲಿರಿಸಿಕೊಂಡು ಕೆಲಸ ಮಾಡಬೇಕಾದ ಪರಿಸ್ಥಿತಿಯಿದೆ.

ಅತ್ತ ಮಳೆರಾಯ ದೆಹಲಿಗೆ ಕಚಗುಳಿಯಿಡುವವನಂತೆ ಆಗಾಗ್ಗೆ ಗಾಳಿ ಮೋಡಗಳ ಅಲೆಗಳ ಮೇಲೆ ಬರುವ ಸನ್ನಾಹ ನಡೆಸಿದಂತೆ ತೋರುತ್ತಿದೆ. ಜೂನ್ ತಿಂಗಳ ಬಿಸಿಲ ಬೇಗೆ ಸ್ವಲ್ಪ ಆರಿದರೂ, ಸೂರ್ಯನ ಪ್ರಖರತೆ, ಹೆಚ್ಚುತ್ತಿರುವ ಆದ್ರತೆ ಮತ್ತು ಅದರಿಂದ ಉದ್ಭವವಾಗುವ ಬೆವರಿನ ಬವಣೆ ಈ ಜುಲೈ ತಿಂಗಳ ಬಳುವಳಿಯಾಗಿದೆ. ಮುಂಬರುವ ಅಗಸ್ಟ ತಿಂಗಳಿನಲ್ಲಿ ಸಂಸತ್ತಿನ ಮಳೆಗಾಲದ ಅಧಿವೇಶನವನ್ನು ನಡೆಸುವುದರ ಬಗ್ಗೆ ಸನ್ನಾಹಗಳು ನಡೆಯುತ್ತಿರುವ ಬಗ್ಗೆ ವರದಿಗಳು ಬರುತ್ತಿವೆ.

ದೆಹಲಿ ಕನ್ನಡಿಗರು ಹಲವಾರು ಬಗೆಗಳಲ್ಲಿ ಈ ಕೊರೊನಾದ ಬವಣೆಯನ್ನು ಎದುರಿಸುತ್ತಿದ್ದಾರೆ. ಕೊರೊನಕ್ಕಿಂತ ಅದರ ಭಯದಿಂದ ಎದ್ದು ಬರುವ ಅಮಾನವೀಯ ನಡವಳಿಕೆಗಳನ್ನು ಹಲವರು ಅನುಭವಿಸಿದ್ದಾರೆ. ಇದನ್ನು ದೆಹಲಿಯ ಕೆಲ ಪ್ರಮುಖ ಆಸ್ಪತ್ರೆಗಳಲ್ಲೂ ಕಾಣಬಹುದಾಗಿದೆ. ಇತ್ತೀಚೆಗೆ ತಮ್ಮ ಬಾಳಸಂಗಾತಿಯನ್ನು ಕಳೆದುಕೊಂಡ ನಮ್ಮ ಆಪ್ತ ದೆಹಲಿ ಕನ್ನಡಿಗರೊಬ್ಬರು ಪಟ್ಟ ಬವಣೆ ಮತ್ತು ಮಾನಸಿಕ ಕ್ರೌರ್ಯದ ಪರಿಯನ್ನು ಅವರಿಂದಲೇ ಕೇಳುತ್ತಿದ್ದಾಗ ನನ್ನ ಕಣ್ಣಾಲಿಗಳು ತುಂಬಿಕೊಳ್ಳತೊಡಗಿದ್ದವು. ಕೆಲದಿನಗಳಿಂದ ತೀರಾ ಅಸ್ವಸ್ಥರಾಗಿದ್ದ ತಮ್ಮ ಮನೆಯವರನ್ನು ಅಸ್ಪತ್ರೆಗೆ ದಾಖಲು ಮಾಡಲು ಅವರು ಪರದಾಡಬೇಕಾದ ಪರಿಯನ್ನು ಕೇಳಿ ನಮ್ಮ ಮನುಷ್ಯತ್ವದ ಮೇಲೆಯೆ ನಂಬಿಕೆ ಕಳೆದುಕೊಳ್ಳುತ್ತಿರುವ ಭಾವ ತುಂಬಿಕೊಳ್ಳತೊಡಗಿತ್ತು. ಅವರ ಅಸ್ವಸ್ಥತೆ ಕೊರೊನಾಗೆ ಸಂಭಂದಪಟ್ಟದ್ದಲ್ಲವಾದರೂ ಈ ಪ್ರತಿಷ್ಠಿತ ಖಾಸಗಿ ಆಸ್ಪತ್ರೆಯ ತುರ್ತು ಚಿಕಿತ್ಸಾಲಯಕ್ಕೆ ಅವರ ಪತ್ನಿಯನ್ನು ಒಯ್ಯಲು ಯಾರೊಬ್ಬರೂ ಅಲ್ಲಿನ ಸಿಬ್ಬಂದಿ ಸಹಾಯಕ್ಕೆ ಬರದಿದ್ದರಿಂದ ತಾವೇ ಸ್ವತಃ ತಮ್ಮ ಪತ್ನಿಯನ್ನು ಸ್ಟ್ರೆಚರ್‌ನ ಮೇಲೆ ಹಾಕಿಕೊಂಡು ಒಳಕ್ಕೆ ಹೋದರೂ ಹಲವಾರು ಸಮಯ ಕಳೆದರೂ ಅವರನ್ನು ಪರೀಕ್ಷಿಸಲು ವೈದ್ಯರು ಬರದಿದ್ದದ್ದು ಅಮಾನವೀಯತೆಯ ಪರಮಾವಧಿ. ನಂತರದಲ್ಲಿ ಬಳಲುತ್ತಿದ್ದ ಅವರನ್ನು ಆಸ್ಪತ್ರೆಗೆ ಸೇರಿಸಿಕೊಳ್ಳಲು ಒಪ್ಪದಿದ್ದದ್ದು ಇನ್ನೊಂದು ಮಾನಸಿಕ ಪೆಟ್ಟು. ಈ ಕೊರೊನಾ ಕಾಲದಲ್ಲಿ ಬೇರೆ ತೀವ್ರವಾದ ಅಸ್ವಸ್ಥತೆಗೆ ದೆಹಲಿಯ ಹಲವಾರು ಆಸ್ಪತ್ರೆಗಳು ತಮ್ಮ ಬಾಗಿಲನ್ನು ಮುಚ್ಚಿ ಬಿಡುವ ಪರಿಯನ್ನು ಯಾವ ರೀತಿಯಲ್ಲಿ ಮಾನವೀತೆಯೆನ್ನಬೇಕು. ಇನ್ನೊಂದು ಘಟನೆಯಲ್ಲಿ ನನ್ನ ಸಹೋದ್ಯೋಗಿಯೊಬ್ಬರ ತಾಯಿಯವರಿಗೆ ತುರ್ತಾಗಿ ಆಗಬೇಕಾದ ಶಸ್ತ್ರಚಿಕಿತ್ಸೆಗೆ ಅವರು ಪಟ್ಟ ಪರಿಪಾಡಿಲು ಅಷ್ಟಿಷ್ಟಲ್ಲ. ಈ ರೀತಿಯ ಕೊರೊನಾಕ್ಕೆ ಸಂಬಂದ ಪಡದ ಅಸ್ವಸ್ಥತೆಗಳನ್ನು ಅಸ್ಪತ್ರೆಗಳಲ್ಲಿ ಪರೀಕ್ಷಿಸಿ ದಾಖಲು ಮಾಡಿಕೊಳ್ಳಲು ಸಾಮಾನ್ಯ ಜನತೆ ಪಟ್ಟ ಬವಣೆಯ ವಿವರಗಳು ಎಲ್ಲರ ಗಮನಕ್ಕೂ ಬರುತ್ತಿಲ್ಲ. ದೆಹಲಿಯಲ್ಲಿ ಕೊರೊನಾಕ್ಕೆಂದೆ ಹತ್ತು ಸಾವಿರ ಹಾಸಿಗೆಗಳು, ಎಲ್ಲ ಪ್ರಮುಖ ಸರಕಾರಿ ಮತ್ತು ಖಾಸಗಿ ಆಸ್ಪತ್ರೆಗಳಲ್ಲಿ ಕೊರೊನಾಕ್ಕೆಂದೆ ಮೀಸಲಿಟ್ಟ ವಾರ್ಡುಗಳು ಇವೆಲ್ಲ ತುಂಬಾ ಸುದ್ದಿಯಲ್ಲಿವೆ. ಮೊನ್ನೆಮೊನ್ನೆಯವರಿಗೆ ದೆಹಲಿಯ ಪ್ರತಿಷ್ಠಿತ ಅಖಿಲ ಭಾರತ ವೈದ್ಯಕೀಯ ವಿಜ್ಞಾನ ಸಂಸ್ಥೆಯ ಓ.ಪಿ.ಡಿ. ಸಾರ್ವಜನಿಕರಿಗಾಗಿ ಪೂರಾ ಮುಚ್ಚಲ್ಪಟ್ಟಿತ್ತು. ದೇಶದ ಮೂಲೆಮೂಲೆಗಳಿಂದ ಇಲ್ಲಿಗೆ ಆರೈಕೆಗೆಂದು ಬರುವ ಜನಸಾಮಾನ್ಯರು ಎಲ್ಲಿ ಹೋಗಬೇಕು?

ದೆಹಲಿಯಲ್ಲಿ ಈಗ ಕೊರೊನಾದ ಓಟಕ್ಕೆ ಕಡಿವಾಣ ಬೀಳುತ್ತಿದೆಯೆಂಬ ವರದಿಗಳು ಬರುತ್ತಿವೆ. ಆದರೆ, ಇದು ತಾತ್ಕಾಲಿಕವೇ ಸರಿ. ಜನಸಮುದಾಯ ಮತ್ತೆ ತಮ್ಮತಮ್ಮ ದೈನಂದಿನ ಜೀವನದಲ್ಲಿ ಎಂದಿನಂತೆ ತೊಡಗಿಕೊಳ್ಳುವ ಪ್ರಯತ್ನ ಮಾಡತೊಡಗಿದಂತೆ ಕೊರೊನಾ ತನ್ನ ಬಾಹುಗಳನ್ನು ವಿಸ್ತರಿಸುವ ಲಕ್ಷಣಗಳು ಕಾಣಿಸುತ್ತಿವೆ. ಉಳ್ಳವರು ಬೇಕಾದ ಮುಂಜಾಗರುಕತಾ ಕ್ರಮಗಳನ್ನು ತೆಗೆದುಕೊಳ್ಳಬಹುದು. ದಿನದಿನ ಎಣಿಸುತ್ತ ಬದುಕುವವರಿಗೆ ಕೆಲಸದಲ್ಲಿ ತೊಡಗಿಕೊಳ್ಳದೆ ಬೇರೆ ದಾರಿಯಿಲ್ಲ. ಕೊರೊನಾವನ್ನು ಒಂದು ಕೈಯಲ್ಲಿ ದೂರ ಸರಿಸುತ್ತ, ಇನ್ನೊಂದು ಕೈಯಲ್ಲಿ ತಮ್ಮ ಬದುಕನ್ನು ಕಟ್ಟಿಕೊಳ್ಳುವ ಕೆಲಸವನ್ನುಅವರು ಮಾಡಿಕೊಳ್ಳಬೇಕಾದ ವಾಸ್ತವತೆ ಬರೀ ದೆಹಲಿಗಷ್ಟೆ ಅಲ್ಲ ನಮ್ಮ ದೇಶದ ತುಂಬೆಲ್ಲಾ ಇದೆ. ಕೊರೊನಾದ ವಿರುದ್ಧ ಹೋರಾಡಿ ಗೆದ್ದವರ ಸಂಖ್ಯೆ ನಮ್ಮ ದೇಶದಲ್ಲಿ ಸುಮಾರು 60 ಪ್ರತಿಶತವಿದ್ದರೆ, ದೆಹಲಿಯಲ್ಲಿ ಅದು ಸುಮಾರು 80 ಪ್ರತಿಶತವಿರುವುದು ನಮಗೆಲ್ಲ ಸ್ವಲ್ಪವಾದರೂ ಸಮಾಧಾನ ತರುವ ವಿಷಯ.

ದೆಹಲಿಯಿರಲಿ, ಕರ್ನಾಟಕವಿರಲಿ ಮತ್ತು ನಮ್ಮ ಇಡೀ ದೇಶವಿರಲಿ, ಮುಂಬರುವ ದಿನಗಳಲ್ಲಿ ಈ ಕೊರೊನಾದ ವಿರುದ್ಧ ನಾವೆಲ್ಲ ನಮ್ಮನಮ್ಮ ಮಾನವೀಯ ಪರಿಧಿಗಳಲ್ಲೇ ನಿಂತುಕೊಂಡು ಬೇಕಾದ ಎಲ್ಲ ಕ್ರಮಗಳನ್ನು (ಮುಖವಾಡ ಮತ್ತು ಅಂತರ) ನಮ್ಮ ದಿನನಿತ್ಯದ ಜೀವನದಲ್ಲಿ ಅಳವಡಿಸಿಕೊಂಡು ಹೋರಾಡಿ ಜಯಿಸೋಣ. ಈ ಎಲ್ಲದರಲ್ಲಿ ನಮ್ಮ ಮೂಲಭೂತವಾದ ಮನುಷ್ಯತ್ವ ಮತ್ತು ಪ್ರೀತಿಯನ್ನು ಮಾತ್ರ ಮರೆಯದಿರೋಣ.

***ಡಾ. ವೆಂಕಟಾಚಲ ಹೆಗಡೆ***
***ಅಧ್ಯಕ್ಷರು***

## ಮುನ್ನೋಟ

ಆತ್ಮೀಯ ಕನ್ನಡ ಬಂಧುಗಳೇ,

ದೆಹಲಿ ಕರ್ನಾಟಕ ಸಂಘದಲ್ಲಿ ಕಾರ್ಯಕ್ರಮಗಳು ಪ್ರತಿ ವರ್ಷ ಯಾವುದೇ ಕುಂದು ಕೊರತೆಯಿಲ್ಲದೆ ಅತ್ಯುತ್ತಮವಾದ ಸಾಂಸ್ಕೃತಿಕ ಕಾರ್ಯಕ್ರಮಗಳ ಮೂಲಕ ಬರುತ್ತಿದ್ದವು. ಆದರೆ ಈ ಮಾರಕ ರೋಗದ ಕಾರಣದಿಂದ ಎಲ್ಲ ಕಾರ್ಯಕ್ರಮಗಳು ಮೊಟಕುಗೊಂಡಿವೆ. ನಿಶ್ಯಬ್ದವಾಗಿದೆ. ಹೊಸ ಕಾರ್ಯಕಾರಿ ಸಮಿತಿ ಬಂದ ಹದಿನೈದು ತಿಂಗಳಲ್ಲಿ ವಾರ್ಷಿಕ ಮಹಾಸಭೆಯು ನಡೆಯಬೇಕಿತ್ತು. ಆದರೆ ಈ ಕೊರೊನ ಇರುವುದರಿಂದ ಮತ್ತು ಸರ್ಕಾರದ ಆದೇಶವನ್ನು ಪಾಲಿಸಬೇಕಿರುವುದರಿಂದ ಸಂಘದ ವಾರ್ಷಿಕ ಮಹಾಸಭೆಯನ್ನು ಮುಂದೂಡಲಾಗಿದೆ.

ವಿಶ್ವದಲ್ಲೇ ಅತೀ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುತ್ತಿದ್ದ ಕನ್ನಡದ ರಾಯಭಾರಿ ಎನಿಸಿದ ದೆಹಲಿ ಕರ್ನಾಟಕ ಸಂಘ ಈ ಬಾರಿ ತುಂಬಾ ಕಡಿಮೆ ಕಾರ್ಯಕ್ರಮಗಳನ್ನು ಮಾಡಬೇಕಾಗುತ್ತದೆ. ಆದಷ್ಟು ಬೇಗನೆ ಈ ಮಾರಕ ರೋಗ ಮುಕ್ತವಾಗಿ, ಬರುವ ದಿನಗಳಲ್ಲಿ ಅತೀ ಹೆಚ್ಚು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡುವಲ್ಲಿ ನಾವು ಯಶಸ್ವಿಯಾಗೋಣ.

ಭಾರತದಾದ್ಯಂತ ಈ ಮಾರಕ ರೋಗದಿಂದ ಮಕ್ಕಳಿಗೆ ನಡೆಯಬೇಕಾಗಿದ್ದ ಪರೀಕ್ಷೆಗಳನ್ನು ಕೆಲವರಿಗೆ ಮೊಟಕುಗೊಳಿಸಲಾಗಿದೆ. ಕೆಲವರಿಗೆ ಮಧ್ಯಂತರ ಫಲಿತಾಂಶವನ್ನು ಕೊಟ್ಟಿದ್ದಾರೆ. ಓದುವ ಮಕ್ಕಳಿಗೆ ತುಂಬಾ ನಷ್ಟ ಉಂಟಾಗಿದೆ. ಆದರೂ ಸಹ ಸರ್ಕಾರದ ನಿಲುವುಗಳಿಗೆ ನಾವು ತಲೆ ಬಾಗುತ್ತಾ ಮನೆಯಲ್ಲಿ ಇರುವ ಮಕ್ಕಳಿಗೆ ಆನ್ ಲೈನ್ ಮತ್ತು ರೆಕಾರ್ಡೆಡ್ ಕ್ಲಾಸುಗಳಿಗೆ ಹೊಂದಿಕೊಳ್ಳಬೇಕಾಗಿದೆ.

ಎಲ್ಲಾ ಮಕ್ಕಳು ನಿಷ್ಠೆಯಿಂದ ಮತ್ತು ಜವಾಬ್ದಾರಿಯಿಂದ ಈ ವರ್ಷದ ವಿದ್ಯಾಭ್ಯಾಸಕ್ಕೆ ಅತಿ ಹೆಚ್ಚು ಗಮನವನ್ನು ನೀಡುತ್ತಾ ವಿದ್ಯಾಭ್ಯಾಸವನ್ನು ಮುಂದುವರಿಸಲಿ ಎಂದು ಆಶಿಸುವೆ.

*ಸಿ.ಎಂ. ನಾಗರಾಜ*
*ಪ್ರಧಾನ ಕಾರ್ಯದರ್ಶಿ*

## ಶ್ರದ್ಧಾಂಜಲಿ

# ಹಿರಿಯ ಸಾಹಿತಿ ಡಾ. ಗೀತಾ ನಾಗಭೂಷಣ ವಿಧಿವಶ



ಕನ್ನಡದ ಹಿರಿಯ ಸಾಹಿತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಮೊದಲ ಮಹಿಳೆ ಡಾ. ಗೀತಾ ನಾಗಭೂಷಣ ದಿನಾಂಕ 28.06.2020 ರಂದು ವಿಧಿವಶರಾಗಿದ್ದಾರೆ. ಅವರಿಗೆ 78 ವರ್ಷ ವಯಸ್ಸಾಗಿತ್ತು. ಕಲಬುರ್ಗಿಯ ಸ್ವಸ್ತಿಕ ನಗರದಲ್ಲಿ ವಾಸವಾಗಿದ್ದರು.

ಕಲಬುರ್ಗಿಯ ಅತ್ಯಂತ ಕುಗ್ರಾಮದಲ್ಲಿ 25 ಮಾರ್ಚ್ 1942ರಲ್ಲಿ ಜನಿಸಿದ ಗೀತಾ ನಾಗಭೂಷಣ ಆಗಿನ ಎಲ್ಲಾ ಸಾಮಾಜಿಕ ಕಟ್ಟುಪಾಡುಗಳನ್ನು ನಿರ್ಲಕ್ಷಿಸಿ ಶಾಲೆ ಕಲಿತವರು. ಬಿಎ, ಬಿಎಡ್ ಹಾಗೂ ಎಂಎ ಪದವಿ ಕಲಿತ ಅವರು ಕೆಲ ಕಾಲ ಶಿಕ್ಷಕಿಯಾಗಿಯೂ ಕಾರ್ಯ ನಿರ್ವಹಿಸಿದ್ದರು.

ಅವರ 'ಬದುಕು' ಕಾದಂಬರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಗೀತಾ ಅವರ ಹೆಸರಲ್ಲಿ ಅನೇಕ ಮೊದಲುಗಳ ದಾಖಲೆಗಳು ಇದೆ.

ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಕನ್ನಡದ ಮೊದಲ ಮಹಿಳಾ ಸಾಹಿತಿ. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಮೊದಲ ಮಹಿಳಾ ಸಾಹಿತಿ. ಭಾರತೀಯ ಭಾಷಾ ಪರಿಷತ್‌ನ ಪ್ರಶಸ್ತಿ ಪಡೆದ ಮೊದಲ ಮಹಿಳೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ.

ಗದಗ್‌ನಲ್ಲಿ 2010ರಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ ಗೌರವವೂ ಅವರಿಗೆ ಸಿಕ್ಕಿದೆ. ಗುಲ್ಬರ್ಗ ವಿಶ್ವವಿದ್ಯಾಲಯದ ಡಾಕ್ಟರೇಟ್ ಪದವಿ, ಅತ್ತಿಮಬ್ಬೆ ಪ್ರಶಸ್ತಿ ಹೀಗೆ ಅನೇಕ ಸಾಧನೆ ಮತ್ತು ಗೌರವಗಳು ಗೀತಾ ನಾಗಭೂಷಣ್ ಅವರಿಗೆ ಸಿಕ್ಕಿದೆ.

ನಾಡೋಜ ಗೀತಾ ನಾಗಭೂಷಣ ತಮ್ಮ ಸುದೀರ್ಘ ಸಾಹಿತ್ಯ ಕೃಷಿಯಲ್ಲಿ ಒಟ್ಟು 27 ಕಾದಂಬರಿ, 50 ಸಣ್ಣ ಕಥೆ, ಎರಡು ಕವನ ಸಂಕಲನ, 12 ನಾಟಕ, ಜೊತೆಗೆ ತಲಾ ಒಂದು ಸಂಪಾದನಾ ಕೃತಿ ಹಾಗೂ ಸಂಶೋಧನಾ ಕೃತಿ ರಚಿಸಿದ್ದಾರೆ.

ಇವರ 'ಹಸಿಮಾಂಸ ಮತ್ತು ಹದ್ದು' ಕೃತಿ 'ಹೆಣ್ಣಿನ ಕೂಗು' ಎನ್ನುವ ಕನ್ನಡ ಸಿನಿಮಾ ಆಗಿತ್ತು.

ಅಗಲಿದ ಹಿರಿಯ ಸಾಹಿತಿ ಡಾ. ಗೀತಾ ನಾಗಭೂಷಣ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.

# ಡಾ. ಗೀತಾ ನಾಗಭೂಷಣ : ಮರೆಯಲಾಗದ ನೆನಪು

ಕನ್ನಡದ ಖ್ಯಾತ ಸಾಹಿತಿ ಗೀತಾ ನಾಗಭೂಷಣ ವಿಧಿವಶರಾಗಿದ್ದಾರೆ. ತಮ್ಮ ನೇರ ನಿಷ್ಠುರ ನುಡಿಗಳಿಂದ ಹೆಸರಾಗಿದ್ದ ಗೀತಾ ಅವರು ನಾಡೋಜ ಪ್ರಶಸ್ತಿ ಪಡೆದ ಮೊದಲ ಮಹಿಳಾ ಸಾಹಿತಿ. ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತ ಮೊದಲ ಮಹಿಳಾ ಸಾಹಿತಿ ಹಾಗೂ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಮೊದಲ ಅಧ್ಯಕ್ಷೆ ಎಂಬ ಹೆಗ್ಗಳಿಕೆ ಅವರದ್ದು. ಸಾಹಿತ್ಯ ಲೋಕಕ್ಕೆ ತಮ್ಮ ಅಪೂರ್ವ ಕೊಡುಗೆ ನೀಡಿದ ಅವರ ಆತ್ಮಕ್ಕೆ ಶಾಂತಿ ದೊರೆಯಲಿ ಎಂದು ಪ್ರಾರ್ಥಿಸುತ್ತೇನೆ.

ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷೆಯಾಗಿದ್ದ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ 2006 ಫೆಬ್ರವರಿ 4 ಮತ್ತು 5 ರಂದು "ಕನ್ನಡ ಸಾಹಿತ್ಯ ಮತ್ತು ಮಹಿಳೆ "ವಿಚಾರ ಸಂಕಿರಣ, ಕವಿಗೋಷ್ಠಿ ಹಾಗೂ ಕರ್ನಾಟಕ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಮಹಿಳೆಯರ ಅಂತರಾಳದ ಮುಕ್ತ ಸಂವಾದ, ಸಮಾಜದಲ್ಲಿ ಸ್ತ್ರೀ ಏನೆಲ್ಲಾ ಸಾಧಿಸಬಲ್ಲಳು ಎಂಬುದರ ವಿಶ್ಲೇಷಣೆ, ಮಹಿಳೆ ಪುರುಷ ಪ್ರಧಾನ ಸಮಾಜದಲ್ಲಿ ಎದುರಿಸುವ ತಾಪತ್ರಯಗಳ ವಸ್ತುನಿಷ್ಠ ಅವಲೋಕನ ಇತ್ಯಾದಿ ಮಹಿಳಾ ಸಂಬಂಧಿತ ವಿಚಾರಗಳನ್ನು ಮಂಡಿಸಲಾಯಿತು.



ಡಾ. ಮಲ್ಲಿಕಾ ಘಂಟಿ, ಮಮತಾ ಸಾಗರ್, ಡಾ. ಸಬೀಹಾ ದಿವಂಗತ ಸರೋಜಿನಿ ಮಹಿಷಿ ಮೊದಲಾದ ನಾಡಿನ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಅಂದಿನ ಅಧ್ಯಕ್ಷರಾದ ಡಾ. ಬಿಳಿಮಲೆ ಅವರ ಸಾರಥ್ಯದಲ್ಲಿ ನಡೆದ ಈ ಕಾರ್ಯಕ್ರಮ ಅತ್ಯುತ್ತಮವಾಗಿ ಮೂಡಿ ಬಂದಿದ್ದು ನೆನಪಾಯಿತು. ಜಂಟಿ ಕಾರ್ಯದರ್ಶಿಯಾಗಿದ್ದ ನಾನು ಕಾರ್ಯಕ್ರಮ ನಿರ್ವಹಿಸಿದ್ದನ್ನು ಮರೆಯುವಂತಿಲ್ಲ.

***ಉಷಾ ಭರತಾದ್ರಿ***

# 'ನೇರ ನಡೆ ನುಡಿಗಳಿಂದ ನಮಗೆಲ್ಲಾ ಆಪ್ತರಾಗಿದ್ದರು'




**ದೆಹಲಿ ಕರ್ನಾಟಕ ಸಂಘದಲ್ಲಿ 2006 ಫೆಬ್ರವರಿ 4 ಮತ್ತು 5 ರಂದು "ಕನ್ನಡ ಸಾಹಿತ್ಯ ಮತ್ತು ಮಹಿಳೆ" ವಿಚಾರ ಸಂಕಿರಣ ಜರಗಿತ್ತು. ಅಂದು ಭಾಗವಹಿಸಿದ ಸಾಹಿತಿ ಡಾ. ಗೀತಾ ನಾಗಭೂಷಣ ಅವರನ್ನು ದೆಹಲಿಯ ಹಿರಿಯ ಕನ್ನಡತಿ ಶ್ರೀಮತಿ ನೇತ್ರಾವತಿ ಮಯ್ಯ ಸ್ವಾಗತಿಸಿದ ಸಂದರ್ಭ. ಡಾ. ಸರೋಜಿನಿ ಮಹಿಷಿ ಮತ್ತು ಅಂದಿನ ಸಂಘದ ಅಧ್ಯಕ್ಷ ಡಾ. ಪುರುಷೋತ್ತಮ ಬಿಳಿಮಲೆ ಅವರನ್ನು ಕಾಣಬಹುದು.**

ನಮ್ಮ ಸಂವೇದನೆಗಳನ್ನು ಸೂಕ್ಷ್ಮಗೊಳಿಸುತ್ತಾ, ಆಗಾಗ ಓದುಗರನ್ನು ಬೆಚ್ಚಿ ಬೀಳಿಸುತ್ತಾ, ತಮ್ಮ ನೇರ ನಡೆ ನುಡಿಗಳಿಂದ ನಮಗೆಲ್ಲಾ ಆಪ್ತರಾಗಿದ್ದ ಗೀತಾ ನಾಗಭೂಷಣ ಅವರಿಗೆ ಅಂತಿಮ ನಮನಗಳು.

ನಾನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿದ್ದಾಗ ಕನ್ನಡ ಸಾಹಿತ್ಯ ಮತ್ತು ಮಹಿಳೆ ಎಂಬ ವಿಷಯದ ಕುರಿತು ಅತ್ಯುತ್ತಮವಾದ ವಿಚಾರ ಸಂಕಿರಣವನ್ನು ನಡೆಸಿಕೊಟ್ಟು (2006) ಮುಂದೆ ಪುಸ್ತಕವನ್ನೂ ಪ್ರಕಟಿಸಿದರು. ಆ ಕಾರ್ಯಕ್ರಮದ ಸಮಾರೋಪ ಭಾಷಣವನ್ನು ಸರೋಜಿನಿ ಮಹಿಷಿಯವರು ಮಾಡಿದ್ದರು.

ಆಪ್ಯಾಯಮಾನವಾದ ನೆನಪುಗಳನ್ನು ಬಿಟ್ಟು ಹೋಗುವವರು ದೊಡ್ಡ ವ್ಯಕ್ತಿಗಳೇ ನಿಜ.

***ಡಾ. ಪುರುಷೋತ್ತಮ ಬಿಳಿಮಲೆ***

# ಮಹತ್ವದ ಲೇಖಕಿಯರು ಭಾಗವಹಿಸಿದ ವಿಚಾರ ಸಂಕಿರಣ

ಕನ್ನಡ ಸಾಹಿತ್ಯದ ಗಟ್ಟಿ ಮಹಿಳಾ ದನಿ ಡಾ. ಗೀತಾ ನಾಗಭೂಷಣ ನಿಧನರಾಗಿದ್ದು ಕೇಳ ಬೇಸರವಾಯಿತು. ಅವರ 'ಬದುಕು' ಕಾದಂಬರಿಯನ್ನು ಓದಿದ್ದೆ. ಮಹಿಳೆಯ ಮೇಲೆ ನಡೆಯುವ ದೌರ್ಜನ್ಯದ ಕುರಿತ ಆ ಕಾದಂಬರಿ ಮನ ಕಲಕಿತ್ತು.

ಮುಂದೆ 2006ರಲ್ಲಿ ದೆಹಲಿ ಕರ್ನಾಟಕ ಸಂಘದಲ್ಲಿ ನಡೆದ 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ವಿಚಾರ ಸಂಕಿರಣದಲ್ಲಿ ಅವರೊಂದಿಗೆ ಮಾತನಾಡುವ ಅವಕಾಶ ಸಿಕ್ಕಿತು. ಅದು ಕನ್ನಡದ ಮಹತ್ವದ ಲೇಖಕಿಯರು ಭಾಗವಹಿಸಿದ ವಿಚಾರ ಸಂಕಿರಣವಾಗಿತ್ತು.

ಅಂದು ಡಾ. ಸರೋಜಿನಿ ಮಹಿಷಿಯವರು ಮಾಡಿದ ಉದ್ಘಾಟನಾ ಭಾಷಣ ಮತ್ತು ಡಾ. ಎಚ್.ಎಸ್. ಶಿವಪ್ರಕಾಶ ಅವರು ಮಂಡಿಸಿದ ವಿಚಾರಗಳನ್ನು ನಾನು ಅಕ್ಷರ ರೂಪಕ್ಕೆ ತಂದಿದ್ದೆ. ಅದನ್ನು ಸಾಹಿತ್ಯ ಅಕಾಡೆಮಿ 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ಕೃತಿಯಲ್ಲಿ ಪ್ರಕಟಿಸಿದೆ. ಮಹತ್ವದ ಲೇಖಕಿಯರ ವಿಚಾರಗಳನ್ನು ಆಲಿಸಲು ಮತ್ತು ವೈಯಕ್ತಿಕವಾಗಿ ನನಗೆ ಡಾ. ಮಹಿಷಿಯವರೊಂದಿಗೆ ಒಡನಾಟ ಕಲ್ಪಿಸಿದ ಸಂದರ್ಭವಾಗಿ ಅದು ನೆನಪಿನಲ್ಲಿ ಇರುತ್ತದೆ. ಆ ಕೃತಿಯಲ್ಲಿ ದೆಹಲಿಯ ಸಾಹಿತಿಗಳಾದ ಡಾ. ಅಹಲ್ಯಾ ಚಿಂತಾಮಣಿ, ಆರ್. ಭರತಾದ್ರಿ ಮತ್ತು ರೇಣುಕಾ ನಿಡಗುಂದಿಯವರ ಕವನಗಳು ಪ್ರಕಟವಾಗಿದೆ.

'ಕನ್ನಡ ಸಾಹಿತ್ಯ ಮತ್ತು ಮಹಿಳೆ' ಕೃತಿಯನ್ನು ಲೇಖಕಿಯರಾದ ಡಾ. ಸಬೀಹಾ ಭೂಮಿಗೌಡ ಮತ್ತು ಡಾ. ಮಲ್ಲಿಕಾ ಘಂಟಿ ಅವರು ಸಂಪಾದಿಸಿದ್ದಾರೆ. ಮುಂದೆ ಇವರಿಬ್ಬರೂ ಕರ್ನಾಟಕದ ಎರಡು ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಉಪಕುಲಪತಿಗಳಾಗಿ ಕಾರ್ಯ ನಿರ್ವಹಿಸಿದ್ದು ಹೆಮ್ಮೆಯ ವಿಚಾರ.


ಡಾ. ಗೀತಾ ನಾಗಭೂಷಣ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ನಡೆದ ಈ ಸಂಗತಿಗಳು ಮತ್ತೆ ನೆನಪಾದವು. ಹಿರಿಯ ಲೇಖಕಿಗೆ ನನ್ನ ಅಂತಿಮ ನಮನಗಳು.

***ಡಾ. ಅವನೀಂದ್ರನಾಥ್ ರಾವ್***

# 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ಕೃತಿಯ ಪ್ರಸ್ತಾವನೆಯ ಆಯ್ದ ಭಾಗ

ಡಾ. ಗೀತಾ ನಾಗಭೂಷಣ ಅವರು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ದೆಹಲಿ ಕರ್ನಾಟಕ ಸಂಘದ ಸಹಯೋಗದೊಂದಿಗೆ 'ಕನ್ನಡ ಸಾಹಿತ್ಯ ಮತ್ತು ಮಹಿಳೆ' ವಿಚಾರ ಸಂಕಿರಣವನ್ನು ಆಯೋಜಿಸಿದ್ದರು. 2006ರಲ್ಲಿ ನಡೆದ ಈ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ವಿಚಾರಗಳನ್ನು ಪುಸ್ತಕರೂಪದಲ್ಲಿ ಸಾಹಿತ್ಯ ಅಕಾಡೆಮಿ ಪ್ರಕಟಿಸಿದೆ. ಆ ಕೃತಿಯ ಪ್ರಸ್ತಾವನೆಯ ಆಯ್ದ ಭಾಗ ಇಲ್ಲಿದೆ.

**–ಸಂಪಾದಕ**




ದೆಹಲಿ, ಮುಂಬೈ, ಹೈದ್ರಾಬಾದ್ ಮುಂತಾದ ಪ್ರದೇಶಗಳ ವಿದ್ವಾಂಸರೂ ಕರ್ನಾಟಕದ ವಿವಿಧ ಭಾಗಗಳಿಂದ ಹೋದ ನಾವೂ ಎರಡು ದಿನಗಳ ಕಾಲ ಕನ್ನಡಿಗರ ತುಂಬ ತುರ್ತಿನ ಸಮಸ್ಯೆಗಳ ಕುರಿತು ಗಂಭೀರ ಚಿಂತನೆಯನ್ನು ನಡೆಸಿದ್ದೇವೆ ಎಂಬುದು ತೃಪ್ತಿಯನ್ನು ನೀಡಿದ ವಿಚಾರವಾಗಿದೆ. ವಿಚಾರಗಳು ಹೀಗೆ ಕೇಳ ಮರೆಯಾಗಬಾರದು; ಅದು ಅಕ್ಷರ ರೂಪಕ್ಕೆ ಬರಬೇಕು ಎಂಬ ಸದುದ್ದೇಶದಿಂದ ಅಕಾಡೆಮಿಯು ವಿಚಾರಸಂಕಿರಣ ಮಾಲೆಯನ್ನು ಪ್ರಕಟಿಸುತ್ತ ಬಂದಿದೆ. ಇದರಿಂದ ಸಾರ್ವಜನಿಕರ ಪ್ರತಿನಿಧಿಯಾದ ಈ ಸಂಸ್ಥೆಯ ಕಾರ್ಯಚಟುವಟಿಕೆಗಳ ಮೌಲಿಕತೆಯನ್ನು ಜನರಿಗೆ ತಿಳಿಸುವ, ಜಾಹೀರುಪಡಿಸುವ ಜವಾಬ್ದಾರಿಯೂ ಇಂಥ ಪ್ರಕಟಣೆಗಳ ಜೊತೆ ಸೇರಿಕೊಂಡಿದೆ ಎಂದು ನಾನು ನಂಬಿದ್ದೇನೆ. ಹೀಗಾಗಿ ಲೇಖನವನ್ನು ಪ್ರತಿಯೊಬ್ಬರೂ ಬರೆದುಕೊಡಬೇಕೆಂದು ನಾನು ಒತ್ತಡವನ್ನು ಹಾಕಿದ್ದೆ. ಕೆಲವು ಲೇಖನಗಳು ಸಕಾಲಕ್ಕೆ ಬೇಗನೆ ತಲುಪಿದವು. ಕೆಲವು ಕಾರಣಾಂತರಗಳಿಂದ ವಿಳಂಬವಾಗಿಯಾದರೂ ತಲುಪಿವೆ. ಇನ್ನು ಕೆಲವನ್ನು ಧ್ವನಿಮುದ್ರಿತ ಭಾಷಣದಿಂದ ಬರಹಕ್ಕೆ ಇಳಿಸಲಾಗಿದೆ. ಒಟ್ಟಿನಲ್ಲಿ ಕನ್ನಡ ಸಾಹಿತ್ಯ ಮತ್ತು ಮಹಿಳೆ ಎಂಬ ರಾಷ್ಟ್ರೀಯ ವಿಚಾರಸಂಕಿರಣದಲ್ಲಿ ನಡೆದ ಮುಖ್ಯ ವಾಗ್ವಾದಗಳು ಹೀಗೆ ಪುಸ್ತಕ ರೂಪದಲ್ಲಿ ಅಚ್ಚಾಗುತ್ತಿರುವುದು ನನಗೆ ಸಂತೋಷವನ್ನು ನೀಡಿದೆ.

ಸಾಹಿತ್ಯ ಅಕಾಡೆಮಿಯ ಕೆಲಸ ಕಾರ್ಯಗಳ ಸಂಯೋಜನೆಯಲ್ಲಿ ಸಾಕಷ್ಟು ಸ್ವಾತಂತ್ರ್ಯ ಮತ್ತು ವಿಶ್ವಾಸವನ್ನು ನೀಡಿ ಸಹಕರಿಸಿದ ಅಧ್ಯಕ್ಷರಾದ ನಾಡೋಜ ಶ್ರೀಮತಿ ಗೀತಾ ನಾಗಭೂಷಣ ಅವರಿಗೆ, ರಿಜಿಸ್ಟ್ರಾರ್ ಶ್ರೀ ವಿ.ಎನ್. ಮಲ್ಲಿಕಾರ್ಜುನಸ್ವಾಮಿ ಅವರಿಗೆ, ಕಚೇರಿ ಕೆಲಸಗಳಲ್ಲಿ ತುಸುವೂ ಬೇಸರಿಸದೆ ನೆರವಾದ ಶ್ರೀಮತಿ ವಿಜಯಾ, ಸೌಭಾಗ್ಯ, ಶ್ರೀ ಹರೀಶ್, ಕೃಷ್ಣ ಇವರುಗಳಿಗೆ ಕೂಡ ನನ್ನ ಕೃತಜ್ಞತೆಗಳು.

ಎಲ್ಲದಕ್ಕೂ ಹೆಚ್ಚಿನ ಜವಾಬ್ದಾರಿ ಹೊತ್ತು ಮತ್ತು ಉತ್ಸಾಹದಿಂದ ಪಾಲ್ಗೊಂಡ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಅವರಿಗೆ, ಡಾ. ಸರೋಜಿನಿ ಮಹಿಷಿ ಮತ್ತು ಡಾ. ಎಚ್.ಎಸ್. ಶಿವಪ್ರಕಾಶ್ ಅವರ ಧ್ವನಿಮುದ್ರಿತ ಭಾಷಣವನ್ನು ಬರಹಕ್ಕೆ ಇಳಿಸಿಕೊಟ್ಟ ದೆಹಲಿ ಕರ್ನಾಟಕ ಸಂಘದ ಶ್ರೀ ಅವನೀಂದ್ರನಾಥ್ ರಾವ್ ಅವರಿಗೆ, ಡಿ.ಟಿ.ಪಿ. ಮಾಡಿದ ಪ್ರಸಾಧನ್ ಕಂಪ್ಯೂಟರ್ಸ್‌ನ ಪುಷ್ಪಲತ, ಮಂಗಳೂರಿನ ಡಾ. ನಾ. ದಾಮೋದರ ಶೆಟ್ಟಿ, ಕರಡು ತಿದ್ದುವಲ್ಲಿ ನೆರವಾದ ಹಿರಿಯ ಗೆಳತಿ ಶ್ರೀಮತಿ ಬಿ.ಎಂ. ರೋಹಿಣಿ ಅವರಿಗೆ, ಮುದ್ರಿಸಿದ ಲಕ್ಷ್ಮೀ ಮುದ್ರಣಾಲಯದ ಮಾಲೀಕರಾದ ಅಶೋಕ್ ಕುಮಾರ್ ಇವರಿಗೆ, ವಿಚಾರಸಂಕಿರಣದ ರೂಪುರೇಷೆಯಿಂದ ತೊಡಗಿ ಪ್ರತಿಯೊಂದು ಹಂತದಲ್ಲೂ ಸಹಭಾಗಿಯಾದ ಗೆಳತಿ ಡಾ. ಮಲ್ಲಿಕಾ ಘಂಟಿ ಅವರಿಗೆ,

ಎಲ್ಲರಿಗೂ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

***ಡಾ. ಸಬೀಹಾ ಭೂಮಿಗೌಡ***
***ಡಾ. ಮಲ್ಲಿಕಾ ಘಂಟಿ***

# ‘ದಿನಕರ’ದಿಂದ ಸಾಮಾಜಿಕ ಮಾಧ್ಯಮದಲ್ಲಿ ಹೊಸ ಪ್ರಯೋಗ

ಸದಾ ಹೊಸತೊಂದನ್ನು ರಂಗದ ಮೇಲೆ ತರುವ ತುಡಿತ ಇಟ್ಟುಕೊಂಡ ‘ದಿನಕರ’ ತಂಡವು ಕೊವಿಡ್ 19 ಕಾರಣ ಇರುವ ಲಾಕ್‌ಡೌನ್ ಸ್ಥಿತಿಯಲ್ಲೂ ತನ್ನ ಚಟುವಟಿಕೆಯನ್ನು ಸಾಮಾಜಿಕ ಮಾಧ್ಯಮಗಳ ಮೂಲಕ ಮುಂದುವರಿಸಲು ನಿರ್ಧರಿಸಿ ಕಲಾವಿದರಿಗೆ ಅವರಿರುವಲ್ಲೇ ಅವರವರ ಕಲಾ ಪ್ರಸ್ತುತಿಯನ್ನು ಜಗತ್ತಿನ ಸಮ್ಮುಖ ಪ್ರದರ್ಶಿಸುವ ಅವಕಾಶವನ್ನು ತಂದುಕೊಡುವಲ್ಲಿ ತನ್ನ ಪ್ರಯತ್ನವನ್ನು ಮುಂದುವರಿಸಿದೆ.

ಮೇ 31ರಂದು ಜೂಮ್ ಆಪ್ ನಲ್ಲಿ ನಡೆದ ತನ್ನ ಮೊದಲನೇ ಪ್ರಸ್ತುತಿ ‘ರಾಗ ರಂಗ’ ದಲ್ಲಿ ದಿನಕರ ತಂಡದ ಕಲಾವಿದರಾದ ಡಾ. ಅಹಲ್ಯಾ ಚಿಂತಾಮಣಿ, ಡಾ. ಹರೀಶ್ ಹೆಗಡೆ, ಡಾ. ರಂಗನಾಥ ಸಿಂಗಾರಿ, ಶ್ರೀಮತಿ ಮಂಜುಳಾ ನಾಗರಾಜ್, ಶ್ರೀಮತಿ ಮಮತಾ ಶಿವರಾಮ್, ಅಮರೇಶ್, ಶ್ರೀಮಂತ ಅವಟಿ, ವೀರೇಶ್ ವಾಲಿಯವರು ತಮ್ಮ ರಂಗಗೀತೆಗಳನ್ನು ಅದ್ಭುತವಾಗಿ ಪ್ರದರ್ಶಿಸಿದರು. ಹಲವಾರು ಪ್ರಸಿದ್ಧ ನಾಟಕಗಳ ರಂಗಗೀತೆಗಳು ಯಾವುದೇ ತಾಂತ್ರಿಕ ತೊಂದರೆ ಇಲ್ಲದೇ ಸುಶ್ರಾವ್ಯವಾಗಿ ಮೂಡಿ ಬಂದವು.

ಜೂನ್ 21ರಂದು ಇನ್ನೊಂದು ಪ್ರಯತ್ನಕ್ಕೆ ಕೈ ಹಾಕಿದ ದಿನಕರ ತಂಡವು ಈ ಬಾರಿ ಪ್ರಸಿದ್ಧ ಲೇಖಕ, ವಿಮರ್ಶಕ, ಕನ್ನಡ-ಮರಾಠಿ ಭಾಷೆಗಳಿಗೆ ಒಂದು ಕೊಂಡಿಯಂತೆ ಸಾಹಿತ್ಯ ರಚನೆ ಮಾಡುತ್ತಿರುವ ಶ್ರೇಷ್ಠ ಅನುವಾದಕ ಡಾ. ರಾಮಕೃಷ್ಣ ಮರಾಠೆಯವರನ್ನು ‘ಗೀತೆ-ನಟನೆ-ಸಂವಾದ ಸಂಗಮ’ ಕಾರ್ಯಕ್ರಮಕ್ಕೆ ಆಮಂತ್ರಿಸಿ ಅವರೊಂದಿಗೆ ‘ಹವ್ಯಾಸಿ ರಂಗಭೂಮಿ ಇಂದು’ ಈ ವಿಷಯವಾಗಿ ಸಂವಾದವನ್ನು ನಡೆಸಿತು.

ಸಂವಾದದಲ್ಲಿ ಭಾಗವಹಿಸಿ ಮಾತನಾಡಿದ ಡಾ. ಮರಾಠೆಯವರು ಹವ್ಯಾಸಿ ರಂಗಭೂಮಿಗೆ ಮೊದಲಿನಿಂದಲೂ ಸವಾಲುಗಳು ಇದ್ದಿದ್ದೇ. ಆದರೆ ಭಾಷಾಭಿಮಾನ ಮತ್ತು ಕಲಾಭಿಮಾನವು ಜೀವಂತವಾಗಿರುವ ಕಲಾವಿದರೆಲ್ಲ ಸೇರಿ ದಿನಕರದಂಥ ಹವ್ಯಾಸಿ ರಂಗತಂಡಗಳನ್ನು ಕಟ್ಟಿ ತಮ್ಮಿಂದಾದಷ್ಟು ಕಲಾ ಸೇವೆ ಮಾಡುತ್ತಿರುವುದು ಶ್ಲಾಘನೀಯ ಎಂದರು.



‘ದಿನಕರ’ದ ಸಂಚಾಲಕ ಶಿವಾನಂದ ಇಂಗಳೇಶ್ವರ



ಲೇಖಕ, ವಿಮರ್ಶಕ ಡಾ. ರಾಮಕೃಷ್ಣ ಮರಾಠೆ

ಜಗತ್ತಿಗೆ ಕೊರೊನಾ ಪಿಡುಗು ಬಂದಿರುವುದರಿಂದ ಕಲಾವಿದರಿಗೆ ತಮ್ಮ ಕಲಾ ಪ್ರದರ್ಶನವನ್ನು ಮಾಡುವ ತುಡಿತಕ್ಕೆ ಹೊಸ ಹೊಸ ವಿಧಾನಗಳನ್ನು ಹುಡುಕಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದ ಅವರು ಕನ್ನಡ ಮತ್ತು ಮರಾಠಿ ರಂಗಭೂಮಿಗಳ ನಡುವಣ ವ್ಯತ್ಯಾಸ, ನಶಿಸುತ್ತಿರುವ ಕೆಲವು ಕಲಾ ಪ್ರಾಕಾರಗಳನ್ನು ಪುನರೂರ್ಜಿತಗೊಳಿಸಬೇಕಾದ ಅಗತ್ಯಗಳ ಕುರಿತು ಅತ್ಯಂತ ಮಾರ್ಮಿಕವಾಗಿ ಮಾತನಾಡಿದರು. ಸಂವಾದವನ್ನು ಶ್ರೀ ಶಿವಾನಂದ ಇಂಗಳೇಶ್ವರರು ನಡೆಸಿಕೊಟ್ಟರು.

ಕಾರ್ಯಕ್ರಮದ ಶೋಭೆಯನ್ನು ಇನ್ನಷ್ಟು ಹೆಚ್ಚಿಸಲು ದಿನಕರದ ಪ್ರತಿಭಾನ್ವಿತ ಕಲಾವಿದರಾದ ಕುಮಾರಿ ಪೂರ್ಣಿಮಾ ಅಡಿಗ, ಡಾ. ರಂಗನಾಥ ಸಿಂಗಾರಿ, ಶ್ರೀಮತಿ ಮಮತಾ ಶಿವರಾಮ್, ಶ್ರೀಮತಿ ಜಯಶ್ರೀ ಬಸವರಾಜು ಹಾಗೂ ಮಾಸ್ಟರ್ ಅಭಿಷೇಕ್ ಉಭಾಳೆ ಇವರುಗಳು ರಂಗಗೀತೆ ಸುಂದರವಾಗಿ ಹಾಡಿದರೆ ಶಶಿಧರ ಮುನವಳ್ಳಿ, ಶ್ರೀಮತಿ ಆಶಾಲತಾ ಮಹಾದೇವ, ಸರ್ವಜ್ಞ ಬಾಲನಗೌಡರ್ ಹಾಗೂ ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಏಕ ವ್ಯಕ್ತಿ ಪ್ರಯೋಗವನ್ನು ಸಮರ್ಥವಾಗಿ ನಿಭಾಯಿಸಿದರು.

ಇದೇ ವೇಳೆ ಡಾ. ಅಹಲ್ಯಾ ಚಿಂತಾಮಣಿಯವರ ದೆಹಲಿ ರಂಗ ಚಟುವಟಿಕೆಗಳ ಒಂದು ನೆನಪು ಎಂಬ ವೀಡಿಯೋವನ್ನು ಪ್ರದರ್ಶಿಸಲಾಯಿತು.

ಕಾರ್ಯಕ್ರಮವನ್ನು ಅನೇಕ ಸಹೃದಯರು ನೋಡಿ ಚಾಟ್ ಮೆಸೇಜ್ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಎರಡೂ ಪ್ರಯೋಗಗಳನ್ನು ಸಂತೋಷ್ ಕುಮಾರ್ ಉಪಾಧ್ಯಾಯ ಅವರು ಅತ್ಯಂತ ಸೂಕ್ತವಾಗಿ ನಿರ್ವಹಿಸಿದರು, ಟಿ.ಎಸ್. ರಮೇಶ್ ಅವರು ತಾಂತ್ರಿಕ ಸಹಾಯ ನೀಡುವ ಮೂಲಕ ಕಾರ್ಯಕ್ರಮದ ಬೆನ್ನೆಲುಬಾದರು.

ಮುಂದಿನ ದಿನಗಳಲ್ಲಿ ದಿನಕರ ತಂಡವು ಇನ್ನಷ್ಟು ಇಂಥ ಪ್ರಯೋಗಗಳನ್ನು ರಂಗಾಸಕ್ತರಿಗಾಗಿ ಪ್ರದರ್ಶಿಸಲಿದೆ.

***ಸಂತೋಷ್ ಕುಮಾರ್ ಉಪಾಧ್ಯಾಯ***

# ಕೊರೊನಾ ಜಾಗೃತಿ ಸಂದೇಶಕ್ಕೆ ಕನ್ನಡತಿಯರ ದನಿ

ಕೇಂದ್ರ ಆರೋಗ್ಯ ಮತ್ತು ಕುಟುಂಬ ಮಂತ್ರಾಲಯ ಕಳೆದ ಕೆಲವು ತಿಂಗಳಿಂದ ಕೊರೊನಾ ವೈರಾಣು ಕುರಿತ ಜಾಗೃತಿ ಸಂದೇಶಗಳನ್ನು ದೂರವಾಣಿ ಮೂಲಕ ನೀಡುತ್ತಿದೆ. ಈ ಸಂದೇಶಗಳಿಗೆ ಧ್ವನಿ ನೀಡಿದವರು ದೆಹಲಿಯಲ್ಲಿರುವ ಕನ್ನಡತಿಯರಾದ ಶ್ರೀಮತಿ ವಿದ್ಯಾಭಟ್, ಡೆರೆಲ್ ಜೆಸಿಕಾ ಫೆರ್ನಾಂಡೀಸ್ ಮತ್ತು ಟಿಂಟುಮೋಳ್ ಜೊಸೆಫ್ ಎನ್ನುವುದು ಹೆಮ್ಮೆಯ ವಿಷಯ.

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾಗಿರುವ ಶ್ರೀಮತಿ ವಿದ್ಯಾಭಟ್ ಅವರು ನಾಟಕ ಸೇರಿದಂತೆ ಇಲ್ಲಿನ ಸಾಂಸ್ಕೃತಿಕ ಚಟುವಟಿಕೆಯಲ್ಲಿ ಸಕ್ರಿಯರಾಗಿದ್ದಾರೆ. ಅವರ ಪತಿ ನಾರಾಯಣ್ ಭಟ್ ಅವರೂ ಸಂಘದ ಸಕ್ರಿಯ ಸದಸ್ಯರು.

ದೆಹಲಿ ಕನ್ನಡ ಶಾಲೆಯಲ್ಲಿ ದೈಹಿಕ ಶಿಕ್ಷಕಿಯಾಗಿರುವ ಡೆರೆಲ್ ಜೆಸಿಕಾ ಫೆರ್ನಾಂಡಿಸ್ ಮೂಲತಃ ಮಂಗಳೂರಿನವರು. ಯು.ಪಿ.ಎಸ್‌ಸಿ ಪರೀಕ್ಷೆಯ ಸಿದ್ಧತೆಗಾಗಿ ದೆಹಲಿಗೆ ಬಂದಿರುವ ಟಿಂಟುಮೋಳ್ ಜೊಸೆಫ್ ಮೂಲತಃ ಸುಳ್ಯದವರು. ಧ್ವನಿ ಕಲಾವಿದರಾಗಿ ಅನುಭವ ಹೊಂದಿರುವ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮಾಜಿ ಅಧ್ಯಕ್ಷ ಎಸ್. ಕೃಷ್ಣ ಭಟ್ ಅವರ ಮೂಲಕ ಈ ಮೂವರು 'ವಾಯ್ಸ್ ಓವರ್' ಜಗತ್ತಿನಗೆ ಪರಿಚಯವಾಗಿದ್ದರು. ಧ್ವನಿ ಕಲಾವಿದರಾಗಿ ದೆಹಲಿಯ ಕನ್ನಡತಿಯರ ಸಾಧನೆಗೆ ಅಭಿನಂದನೆಗಳು.



ವಿದ್ಯಾಭಟ್



ಡೆರೆಲ್ ಜೆಸಿಕಾ ಫೆರ್ನಾಂಡಿಸ್



ಟಿಂಟುಮೋಳ್ ಜೊಸೆಫ್

**ಚಿಣ್ಣರಲೋಕ**

# ಕನ್ನಡ ಶಿಶುಗೀತೆಗಳು




ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ದೆಹಲಿ ಘಟಕದ ವತಿಯಿಂದ ವಿಶ್ವ ಪರಿಸರ ದಿನದ ಪ್ರಯುಕ್ತ ದಿನಾಂಕ 05.06.2020ರಂದು ಮಕ್ಕಳಲ್ಲಿ ಪರಿಸರ ಪ್ರಜ್ಞೆಯನ್ನು ಬೆಳೆಸುವ ಸಲುವಾಗಿ ಝೂಮ್ ಆ್ಯಪ್ ಮೂಲಕ 'ಕನ್ನಡ ಶಿಶುಗೀತೆಗಳು' ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆ, ನವದೆಹಲಿ, ಗುರುಗಾಂವ್ ಕನ್ನಡ ಕಲಿಕಾ ಕೇಂದ್ರ, ಹರಿಯಾಣ ಹಾಗೂ ಭಿವಾಡಿ ಕನ್ನಡ ಕಲಿಕಾ ಕೇಂದ್ರ, ರಾಜಸ್ಥಾನ ಹೀಗೆ ಮೂರು ರಾಜ್ಯದ ಒಟ್ಟು 37 ಮಕ್ಕಳು ಕಾರ್ಯಕ್ರಮದಲ್ಲಿ ಬಹಳ ಆಸಕ್ತಿಯಿಂದ ಭಾಗವಹಿಸಿದರು.

ಮುಖ್ಯ ಅತಿಥಿಯಾಗಿ ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ, ಪರಿಸರ ಪ್ರೇಮಿ ಸಿ.ಎನ್. ಅಶೋಕ್ ಅವರು ಕಾರ್ಯಕ್ರಮಕ್ಕೆ ಶುಭ ಹಾರೈಸಿ ಮಾತನಾಡಿ ಈ ದಿಗ್ಬಂಧನದ ಸಮಯದಲ್ಲೂ ಎಳೆಯ ಮಕ್ಕಳಲ್ಲಿ ಕನ್ನಡ ಸಾಹಿತ್ಯಾಸಕ್ತಿಯನ್ನು ಜೊತೆಗೆ ಬೌದ್ಧಿಕ ವಿಚಾರ ಶಕ್ತಿಯನ್ನು ಇಂತಹ ಕಾರ್ಯಕ್ರಮದ ಮೂಲಕ ಬೆಳೆಸುತ್ತಿರುವುದು ಅಭಿನಂದನೀಯ ವಿಚಾರ. ಹೊರನಾಡಿನಲ್ಲಿದ್ದರೂ ಮಕ್ಕಳಿಗಿರುವ ಭಾಷೆಯ ಕುರಿತಾದ ಮಮತೆ, ಅಭಿಮಾನ ನಮ್ಮೆಲ್ಲರಿಗೂ ಆದರ್ಶನೀಯವಾದುದು ಎಂದರು.

ಕಾರ್ಯಕ್ರಮದಲ್ಲಿ ಒಂದು ಎರಡು ಬಾಳೆಲೆ ಹರಡು, ಬಾಳ ಒಳ್ಳೆ ನಮ್ಮಿಸ್ಸು, ಕಳ್ಳ ಬೆಕ್ಕು ಬಂದಿತ್ತು, ಆನೆ ಬಂತು ಆನೆ, ಮೊಲದ ಮರಿ ಮೊಲದ ಮರಿ, ರೊಟ್ಟಿ ಅಂಗಡಿ ಕಿಟ್ಟಪ್ಪ, ದೊಡ್ಡ ಹೊಟ್ಟೆ ಗಣಪ, ಬಣ್ಣದ ತಗಡಿನ ತುತ್ತೂರಿ, ತೋಟಕೆ ಹೋಗೊ ತಿಮ್ಮ, ಅಣ್ಣನು ಮಾಡಿದ ಗಾಳಿಪಟ, ನಮ್ಮ ಮನೆಯಲೊಂದು ಗುಬ್ಬಿ, ಕನ್ನಡಕೆ ಹೋರಾಡು ಕನ್ನಡದ ಕಂದ ಮುಂತಾದ ಕನ್ನಡ ಶಿಶುಗೀತೆಗಳನ್ನು ಮಕ್ಕಳು ಅಭಿನಯ ಹಾಗೂ ಭಾವಪೂರ್ವಕವಾಗಿ ಪ್ರಸ್ತುತಪಡಿಸಿ ಎಲ್ಲರ ಪ್ರಶಂಸೆಗೆ ಪಾತ್ರರಾದರು.

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯಕಾರಿ ಸಮಿತಿ ಸದಸ್ಯರಾದ ತಿಮ್ಮಪ್ಪ ಜಿ. ಆರ್., ಸಂತೋಷ ಕೆ. ಕೆ., ಮಾಲಿನಿ ಪ್ರಹ್ಲಾದ್, ಗುರುಗಾಂವ್ ಕನ್ನಡ ಸಂಘದ ಅಧ್ಯಕ್ಷ ಸಾಯಿಪ್ರಸಾದ್ ಎಚ್., ಪ್ರಧಾನ ಕಾರ್ಯದರ್ಶಿ ಕೃಷ್ಣಪ್ಪ ಎಂ., ಹಾಗೂ ಭಿವಾಡಿ ಕನ್ನಡ ಕಲಿಕಾ ಕೇಂದ್ರದ ಗೋಪಾಲ ಕೃಷ್ಣ ಭಟ್ ಕಾರ್ಯಕ್ರಮದ ಕೊನೆಯವರೆಗೂ ಉಪಸ್ಥಿತರಿದ್ದು ಮಕ್ಕಳೆಲ್ಲರೂ ಪ್ರಸ್ತುತಪಡಿಸಿದ ಶಿಶುಗೀತೆಗಳನ್ನು ಆಲಿಸಿ, ಪ್ರೋತ್ಸಾಹಿಸಿ ಶುಭ ಹಾರೈಸಿದರು.

ಕರ್ನಾಟಕ ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ತು, ಕೇಂದ್ರ ಘಟಕದ ನಿರ್ದೇಶಕರು ಅರುಣ್, ದೆಹಲಿ ಘಟಕದ ಖಜಾಂಚಿ ಅಮರೇಶ, ಮಹಿಳಾ ಕಾರ್ಯದರ್ಶಿ ಲಾವಣ್ಯ ಬಸವರಾಜು ಹಾಗೂ ಸದಸ್ಯೆ ರೇಖಾ ಐ. ಭಾಗವಹಿಸಿದ್ದರು. ದೆಹಲಿ ಘಟಕದ ಅಧ್ಯಕ್ಷ ಅರವಿಂದ ಬಿಜ್ಜೈ ಅವರು ಸ್ವಾಗತಿಸಿದರು. ಕು। ಅಭಿಷೇಕ್ ಉಭಾಳೆ ಕಾರ್ಯಕ್ರಮ ನಿರೂಪಿಸಿದರು.

*ಅರವಿಂದ ಬಿಜ್ಜೈ*

# ಆಯುರ್ವೇದ ಮತ್ತು ಯೋಗಗಳ ನೆರವಿನೊಂದಿಗೆ ಕೋವಿಡ್-19 ವಿರುದ್ಧ ಕದನ

**ಇಂಗ್ಲೀಷ್ ಮೂಲ : ಡಾ. ಭೀಮ ಭಟ್**

*ಅನುವಾದ : ಸಂತೋಷ್ ಕುಮಾರ್‌ಉಪಾಧ್ಯಾಯ*

ಕಳೆದ ಕೆಲ ತಿಂಗಳಿಂದ ಕೊರೋನಾ ಮಹಾಮಾರಿ ಇಡೀ ಜಗತ್ತನ್ನೇ ಆವರಿಸಿ ಕಾಡುತ್ತಿದೆ. ಇದುವರೆಗೆ 215ಕ್ಕೂ ಹೆಚ್ಚು ದೇಶಗಳನ್ನು ತನ್ನ ಕಬಂಧ ಬಾಹುಗಳಿಂದ ಹಿಡಿದು ಹಿಂಡುತ್ತಿರುವ ಈ ರೋಗ ಇದುವರೆಗೆ 97 ಲಕ್ಷ ಜನರನ್ನು ರೋಗ ಪೀಡಿತರನ್ನಾಗಿ ಮಾಡಿ 4 ಲಕ್ಷಕ್ಕೂ ಹೆಚ್ಚು ಜನರನ್ನು ಆಹುತಿ ಪಡೆದಿದೆ. ಭಾರತದಲ್ಲಿ ಇದೀಗ ಐದೂವರೆ ಲಕ್ಷ ಜನರು ಈ ಸೋಂಕಿಗೆ ಒಳಗಾಗಿದ್ದು ಇದುವರೆಗೆ ಹದಿನಾರು ಸಾವಿರಕ್ಕೂ ಹೆಚ್ಚು ಜನರು ಪ್ರಾಣ ಕಳೆದುಕೊಂಡಿದ್ದಾರೆ. ಏತನ್ಮಧ್ಯೆ ಜಗತ್ತಿನಲ್ಲಿ 40 ಲಕ್ಷಕ್ಕೂ ಹೆಚ್ಚು ಜನರು ಮತ್ತು ಭಾರತದಲ್ಲಿ ಮೂರು ಲಕ್ಷಕ್ಕೂ ಹೆಚ್ಚು ಜನರು ಗುಣಮುಖರಾಗುತ್ತಿರುವುದು ಒಂದು ಆಶಾಕಿರಣವಾಗಿದೆ.

ಚೀನಾದ ವುಹಾನ್ ಪ್ರಾಣಿ ಮಾರುಕಟ್ಟೆಯಿಂದ ಹುಟ್ಟಿ ಕರಾಳ ರೂಪ ತಳೆದ ಈ ಸಾಂಕ್ರಾಮಿಕ ರೋಗವು ಅಮೇರಿಕಾ, ಇಟಲಿ, ಸ್ಪೇನ್, ಇಂಗ್ಲೆಂಡ್ ಬ್ರಾಜಿಲ್ ಮತ್ತು ಜಪಾನ್‌ಗಳಂಥ ಅತ್ಯಂತ ಸ್ವಚ್ಛತೆಯನ್ನು ಕಾಪಾಡಿಕೊಳ್ಳುವ ಹಾಗೂ ಆರೋಗ್ಯದ ಕಡೆ ತೀವ್ರ ಕಾಳಜಿ ತೋರುವ ದೇಶಗಳಲ್ಲೂ ಹರಡುತ್ತಿದೆ. ವೈದ್ಯಕೀಯ ವಿಜ್ಞಾನಕ್ಕೆ ಇದರ ನಿಯಂತ್ರಣದ ವಿಷಯದಲ್ಲಿ ಯಾವುದೇ ಖಚಿತ ಉತ್ತರ ಇನ್ನೂ ಸಿಕ್ಕಿಲ್ಲ. ರೋಗ ತಡೆಗೆ ಏನನ್ನು ಮಾಡಬೇಕು? ಚಿಕಿತ್ಸೆಯ ಮಾರ್ಗಗಳೇನು? ವ್ಯಾಕ್ಸಿನ್ ಯಾವುದು? ಈ ಎಲ್ಲವುಗಳಿಗೆ ಇನ್ನೂ ಉತ್ತರದ ಹುಡುಕಾಟ ನಡೆದೇ ಇದೆ.

ಪ್ರಾಣಿಜನ್ಯವಾದ ಈ ರೋಗವು ಪ್ರಮುಖವಾಗಿ ರೋಗ ಪೀಡಿತ ವ್ಯಕ್ತಿಯ ಜೊಲ್ಲು ಮತ್ತು ಶ್ಲೇಷ್ಮಗಳ ಹನಿಯಿಂದ ಒಬ್ಬರಿಂದ ಇನ್ನೊಬ್ಬರಿಗೆ ಹರಡುವಂಥ ರೋಗ. ಇದರ ಪ್ರಾರಂಭಿಕ ಲಕ್ಷಣಗಳೆಂದರೆ- ಕಡಿಮೆ ಪ್ರಮಾಣದ ನೆಗಡಿ, ಕೆಮ್ಮು, ಮೈಕೈ ನೋವು ಹಾಗೂ ಜ್ವರ. ಇದು ಈ ಹಂತದಲ್ಲಿ ಯಾವುದೇ ವಿಶೇಷ ಚಿಕಿತ್ಸೆಯಿಲ್ಲದೇ ಗುಣವಾಗಬಲ್ಲದು. ಆದರೆ ರೋಗ ತೀವ್ರ ಸ್ವರೂಪಕ್ಕೆ ತಿರುಗಿದಾಗ ರೋಗಿಗೆ ಉಸಿರಾಟದ ತೊಂದರೆ, ಬಾಯಿ ರುಚಿ ಕಳೆದುಕೊಳ್ಳುವುದು, ವಾಸನಾ ಗ್ರಹಣ ಶಕ್ತಿ ಕುಂದುವುದು, ಕೀಲುಗಳಲ್ಲಿ ನೋವು, ಶ್ವಾಸಾಂಗ ಮತ್ತು ಮೂತ್ರಕೋಶಗಳ ವೈಫಲ್ಯ ಉಂಟಾಗಿ ಅದರಿಂದ ಬಹು ಅಂಗ ವೈಫಲ್ಯವಾಗಿ ಕೊನೆಗೆ ಆತ ಸಾವನ್ನಪ್ಪುವ ಸ್ಥಿತಿ ಬರುತ್ತದೆ.

ಈ ರೋಗವು ವೃದ್ಧರು, ಹೃದಯ ರೋಗಿಗಳು, ಮಧುಮೇಹ ರೋಗಿಗಳು,

**ಯಾರಲ್ಲಿ ದೈಹಿಕ ಶಕ್ತಿ ಮತ್ತು ರೋಗ ಪ್ರತಿರೋಧನಾ ಶಕ್ತಿಗಳ ಕೊರತೆ ಇರುತ್ತದೋ ಅವರಲ್ಲಿ ಈ ರೋಗ ಮನೆ ಮಾಡುತ್ತದೆ. ಕೋವಿಡ್-19 ವೈರಸ್ ರೋಗವನ್ನು 'ಆಗಂತುಕ ಹೇತುಜನ್ಯ ಕಫವಾತ ಪ್ರಧಾನ ಸನ್ನಿಪಾತಜ ಜ್ವರ' ಎಂದು ಕರೆಯಬಹುದು.**

ಶ್ವಾಸಾಂಗ ರೋಗಿಗಳು ಮತ್ತು ಕ್ಯಾನ್ಸರ್ ಪೀಡಿತರ ಮೇಲೆ ತನ್ನ ಪ್ರಭಾವವನ್ನು ಹೆಚ್ಚು ಬೀರುತ್ತದೆ. ಇದರಿಂದಾಗಿ ಜನರ ಜೀವನವು ಅಸ್ತವ್ಯಸ್ತವಾಗಿದ್ದು ಜಗತ್ತಿನಾದ್ಯಂತ ಜನರ ಮನಸ್ಸಿನಲ್ಲಿ ಒಂದು ರೀತಿಯ ಭಯ, ಖಿನ್ನತೆ, ಮಾನಸಿಕ ಸಮಸ್ಯೆಗಳು ತಲೆದೋರಿವೆ. ಈ ಎಲ್ಲಾ ಕಾರಣಗಳಿಂದಾಗಿ ಕೊರೋನಾ ವೈರಸ್‌ಗೆ ಒಂದು ಸಮರ್ಥವಾದ ವ್ಯಾಕ್ಸಿನನ್ನು ತಯಾರಿಸಲೇಬೇಕಾದ ತುರ್ತು ಸ್ಥಿತಿ ಎದುರಾಗಿದೆ.

ಈ ವಿಷಮ ಸ್ಥಿತಿಯ ನಿಯಂತ್ರಣಕ್ಕೆ ಹಾಗೂ ನಿರ್ಮೂಲನೆಗೆ ಆಯುರ್ವೇದ ಮತ್ತು ಯೋಗಗಳು ಆಶಾಕಿರಣಗಳಾಗಿ ನಮ್ಮ ಮುಂದೆ ನಿಂತಿವೆ.

### ಆಯುರ್ವೇದ :

ಭಾರತದ ಪುರಾತನ ವೈದ್ಯಕೀಯ ಪದ್ಧತಿಯಾದ ಆಯುರ್ವೇದವು ಶರೀರ, ಮನಸ್ಸು ಮತ್ತು ಆತ್ಮಗಳನ್ನು ಗಮನದಲ್ಲಿರಿಸಿಕೊಂಡು ರೋಗಗಳನ್ನು ಗುಣಪಡಿಸುವ ಆಧ್ಯಾತ್ಮಿಕ ವಿಧಾನವಾಗಿದೆ. ಇದು ಪಂಚ ಮಹಾಭೂತ ಮತ್ತು ತ್ರಿದೋಷ (ವಾತ, ಪಿತ್ತ, ಕಫ) ಸಿದ್ಧಾಂತವನ್ನಾಧರಿಸಿದೆ. ದೋಷಗಳ ಸಮತೋಲನವೇ ಆರೋಗ್ಯ ಮತ್ತು ಅವುಗಳ ಅಸಮತೋಲನವೇ ರೋಗ. ಆಯುರ್ವೇದದ ಮೂಲ ಉದ್ದೇಶವೇ ಆರೋಗ್ಯ ವರ್ಧನೆ, ರೋಗ ತಡೆ ಮತ್ತು ನಿರ್ಮೂಲನೆ.

### ರೋಗಗಳಲ್ಲಿ ಎರಡು ವಿಧ :

ಶಾರೀರಿಕ ಮತ್ತು ಮಾನಸಿಕ ರೋಗ. ರೋಗ ಕಾರಣಗಳ ಆಧಾರದಲ್ಲಿ ಮುಖ್ಯವಾಗಿ ಎರಡು ವಿಧ: ಬಾಹ್ಯ ಮತ್ತು ಅಭ್ಯಂತರ. ಎಲ್ಲಾ ರೋಗಗಳಿಗೂ ಮೂಲ ಕಾರಣ ಅಸಮರ್ಪಕ ಆಹಾರ ಮತ್ತು ಜೀವನ ಶೈಲಿ.



**ಡಾ. ಭೀಮ ಭಟ್ಟ, ಎಂ.ಡಿ (ಆಯುರ್ವೇದ) ಇವರು ನವದೆಹಲಿಯ ಹೋಲಿ ಫೆಮಿಲಿ ಹಾಸ್ಪಿಟಲ್‌ನ ಹಿರಿಯ ಸಲಹಾಕಾರರಾಗಿ ಮತ್ತು ಆಯುರ್ವೇದ ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ**

ವುಹಾನಿನಲ್ಲಿ ಅಸಮರ್ಪಕವಾದ ಹಾಗೂ ವಿರುದ್ಧ ಪ್ರಕೃತಿಯ ಆಹಾರವನ್ನು ಉದ್ದೇಶ ಪೂರ್ವಕವಾಗಿ ಸೇವನೆ ಮಾಡಿದ ಕಾರಣವೇ ಕೊರೋನಾ ವೈರಸ್ ಹುಟ್ಟಲು ಮತ್ತು ಹರಡಲು ಕಾರಣವಾಯಿತು ಎನ್ನಬಹುದು.

ಎಲ್ಲರಿಗೂ ಈ ರೋಗ ಬರಲಾರದು. ರೋಗ ನಿರೋಧಕ ಶಕ್ತಿ (ಓಜಸ್- ವ್ಯಾಧಿ ಕ್ಷಮತ್ವ) ಹೆಚ್ಚಿದ್ದರೆ ಈ ರೋಗವು ಸುಲಭವಾಗಿ ಹತ್ತಿರಕ್ಕೆ ಸುಳಿಯಲಾರದು. ಒಂದು ವೇಳೆ ಬಂದರೂ ಕೂಡಾ ಗುಣಮುಖರಾಗಬಹುದು. ಯಾರು ಕಫ- ವಾತ ಪ್ರಕೃತಿಯವರೋ ಅವರಿಗೆ ಈ ರೋಗದ ಅಪಾಯ ಹೆಚ್ಚು.

ಪುರಾತನ ಆಯುರ್ವೇದ ಗ್ರಂಥಗಳಲ್ಲಿ ಇಂಥ ಮಹಾ ಸಾಂಕ್ರಾಮಿಕಗಳಿಗೆ ಜನಪದೋಧ್ವಂಸ ರೋಗಗಳೆಂದು ವರ್ಣಿಸಲಾಗಿದೆ. ಅವುಗಳ ಕುರಿತು ಸಾಕಷ್ಟು ವಿವರವಾಗಿ ಹೇಳಲಾಗಿದೆ. ಚರಕ ಸಂಹಿತೆಯ ವಿಮಾನ ಸ್ಥಾನ, 7ನೇ ಅಧ್ಯಾಯದಲ್ಲಿ ಶ್ಲೇಷ್ಮಜ ಸೂಕ್ಷ್ಮ ಕ್ರಿಮಿಯು ಶ್ವಾಸ ಪ್ರಣಾಲಿಯ ಮೇಲೆ ಪರಿಣಾಮ ಬೀರುತ್ತದೆ ಎಂದು ಚರಕ ಹೇಳಿರುವುದು ಕೊರೋನಾದಂಥ ವೈರಸ್ಸಿಗೆ ಎಂದೇ ಹೇಳಬಹುದು. ಅಂಥ ಕ್ರಿಮಿಯು ಹೊರಗಿನಿಂದ ಶರೀರವನ್ನು ಸೇರಿ ಕಫ ಮತ್ತು ವಾತ ದೋಷಗಳೊಂದಿಗೆ ಹಸ್ತಕ್ಷೇಪ ಮಾಡಿ ಅಮವನ್ನು(ವಿಷ) ಉಂಟುಮಾಡುತ್ತದೆ ಎಂದು ಆ ಗ್ರಂಥವು

ಸ್ಪಷ್ಟವಾಗಿ ಹೇಳಿದೆ. ಉತ್ಪತ್ತಿಯಾದ ವಿಷದ ಅಂಶವು ನೆಗಡಿ, ಕಫ, ಮೈಕೈ ನೋವು, ಜ್ವರಗಳನ್ನು ಉಂಟುಮಾಡುತ್ತದೆ. ಸೋಂಕಿಗೆ ಈಡಾದ ವ್ಯಕ್ತಿಯಲ್ಲಿ ರೋಗವು ಎದ್ದು ಕಾಣಿಸಲು 5-14 ದಿನಗಳು ತಗುಲಬಹುದು. ರೋಗದ 6 ಹಂತಗಳೆಂದರೆ (ಕ್ರಿಯಾಕಾಲ)- ಸಂಚಯ, ಪ್ರಕೋಪ, ಪ್ರಸರ, ಸ್ಥಾನಸಂಶ್ರಯ, ವ್ಯಕ್ತಿ ಮತ್ತು ಭೇದ. ಯಾರಲ್ಲಿ ದೈಹಿಕ ಶಕ್ತಿ ಮತ್ತು ರೋಗ ಪ್ರತಿರೋಧನಾ ಶಕ್ತಿಗಳ ಕೊರತೆ ಇರುತ್ತದೋ ಅವರಲ್ಲಿ ಈ ರೋಗ ಮನೆ ಮಾಡುತ್ತದೆ. ಕೋವಿಡ್-19 ವೈರಸ್ ರೋಗವನ್ನು 'ಆಗಂತುಕ ಹೇತುಜನ್ಯ ಕಫವಾತ ಪ್ರಧಾನ ಸನ್ನಿಪಾತಜ ಜ್ವರ' ಎಂದು ಕರೆಯಬಹುದು.

**ಕೋವಿಡ್-19 ರೋಗದ ಲಕ್ಷಣಗಳು :**
ಒಣ ಕೆಮ್ಮು, ಗಂಟಲಲ್ಲಿ ಕಿರಿಕಿರಿ, ನೆಗಡಿ, ಸೀನು ಭೇದಿ, ದೇಹ ಭಾರವಾದಂತೆ ಅನಿಸುವಿಕೆ, ಜ್ವರ ಮೈಕೈ ನೋವು, ದಣಿವು, ಅಶಕ್ತತೆ, ಬಾಯಿ ರುಚಿ ಇಲ್ಲದಿರುವುದು, ವಾಸನಾ ಗ್ರಹಣಾ ಶಕ್ತಿ ಕಡಿಮೆಯಾಗುವುದು, ಬಾವು, ಅಂಟಂಟಾದ ಕಫ, ಉಸಿರಾಟದ ತೊಂದರೆ, ಬಹು ಅಂಗಗಳ ಮೇಲೆ ಪ್ರಭಾವ, ತೀವ್ರವಾದ ಪಕ್ಷದಲ್ಲಿ ಸಾವು.

**ರೋಗ ನಿರ್ವಹಣೆ**
ಆಯುರ್ವೇದವು ಮೂರು ವಿಧದ ರೋಗ ನಿರ್ವಹಣಾ ವಿಧಾನಗಳನ್ನು ಹೇಳುತ್ತದೆ.

1. ದೈವ ವ್ಯಪಾಶ್ರಯ : ದೇವರ ಪ್ರಾರ್ಥನೆ, ಮಂತ್ರೋಚ್ಚಾರ, ಜಪ ಇತ್ಯಾದಿ

2. ಯುಕ್ತಿ ವ್ಯಪಾಶ್ರಯ : ಸುಯೋಜಿತ ವೈಜ್ಞಾನಿಕ ಚಿಕಿತ್ಸೆ

ಅ) ಸಂಶಮನ-ಸೂಕ್ತ ಆಹಾರ ಪದ್ಧತಿ ಮತ್ತು ಜೀವನ ಶೈಲಿಯನ್ನು ಪಾಲಿಸುವ ಮೂಲಕ, ಗಿಡಮೂಲಿಕೆಗಳ ಔಷಧಗಳನ್ನು ಸೇವಿಸುವ ಮೂಲಕ ಪಾಚನ ಶಕ್ತಿಯನ್ನು ಹೆಚ್ಚಿಸಿಕೊಂಡು ದೇಹದಲ್ಲಿರಬಹುದಾದ ವಿಷವನ್ನು ನಾಶ ಮಾಡುವುದು. ತ್ರಿದೋಷಗಳ ಸಮತೋಲನವನ್ನು ಕಾಯ್ದುಕೊಳ್ಳುವುದೇ ಇದರ ಉದ್ದೇಶ.

ಬ) ಸಂಶೋಧನ – ಪಂಚಕರ್ಮ ಪದ್ಧತಿಯಿಂದ ಕಶ್ಮಲವನ್ನು ಹೊರಹಾಕುವುದು.

3. ಸತ್ವಾವಜಯ : ಮಾನಸಿಕ ಶಕ್ತಿಯನ್ನು ವೃದ್ಧಿಸಲು ಮನೋವೈಜ್ಞಾನಿಕ ಚಿಕಿತ್ಸೆ.

ಕೊರೋನಾ ವೈರಸ್‌ನ ಪ್ರಕೋಪ ಹೆಚ್ಚಾಗಿರುವ ಪ್ರಸಕ್ತ ಸನ್ನಿವೇಶದಲ್ಲಿ ರೋಗ ತಡೆ ಮತ್ತು ರೋಗನಿರೋಧಕ ಶಕ್ತಿಯನ್ನು ಹೆಚ್ಚಿಸುವ ಬಗ್ಗೆ ನಾವೆಲ್ಲಾ ಹೆಚ್ಚು ಜಾಗೃತರಾಗಿರಬೇಕು. ಅದಕ್ಕಾಗಿ ನಾವು ಈ ಕೆಳಗಿನ ಕ್ರಮಗಳನ್ನು ಪಾಲಿಸಲೇಬೇಕು:

1. ಮಾಸ್ಕನ್ನು ಕಡ್ಡಾಯವಾಗಿ ಧರಿಸಬೇಕು

2. ಕೈಗಳನ್ನು ಆಗಾಗ ತೊಳೆದುಕೊಂಡು ಶುಚಿತ್ವವನ್ನು ಕಾಪಾಡಿಕೊಳ್ಳಬೇಕು

3. ಕಣ್ಣು, ಮೂಗು, ಬಾಯಿಗಳನ್ನು ಮುಟ್ಟಿಕೊಳ್ಳಬಾರದು

4. ಕೆಮ್ಮುವಾಗ, ಸೀನುವಾಗ ಬಾಯಿಗೆ ಅಡ್ಡವಾಗಿ ಕೈ/ಕರವಸ್ತ್ರವನ್ನು ಹಿಡಿಯಬೇಕು

5. ಸಾಮಾಜಿಕ ಅಂತರವನ್ನು ಕಾಯ್ದುಕೊಳ್ಳಬೇಕು

6. ಏಕಾಂತವಾಸ ಅಥವಾ ಮನೆಯಲ್ಲೇ ಇರುವಿಕೆ

7. ಬಿಸಿ ನೀರು ಸೇವನೆ

8. ತಂಪಾದ ನೀರು, ಆಹಾರ ಮತ್ತು ವಾತಾವರಣದಿಂದ ದೂರ ಇರುವುದು

ರೋಗ ನಿರೋಧಕ ಶಕ್ತಿ ಹೆಚ್ಚಿಸಿಕೊಳ್ಳಲು ಈ ಕೆಳಗಿನ ಪ್ರಮಾಣದಲ್ಲಿ ಔಷಧವನ್ನು ಸೇವಿಸಬಹುದು:

ಅಮಲಕೀ 1ಗ್ರಾಂ
ಅಶ್ವಗಂಧ 1 ಗ್ರಾಂ
ಗುಢೂಚಿ(ಅಮೃತಬಳ್ಳಿ) 1 ಗ್ರಾಂ
ಬ್ರಾಹ್ಮಿ (ಒಂದೆಲಗ) 1 ಗ್ರಾಂ

ಇವುಗಳನ್ನು ದಿನಕ್ಕೊಮ್ಮೆ ಬಿಸಿ ಹಾಲು ಅಥವಾ ನೀರಿನಲ್ಲಿ ಬೆರೆಸಿ ಸೇವಿಸಬಹುದು. ಚ್ಯವನಪ್ರಾಶ ಅವಲೇಹವನ್ನು ದಿನಕ್ಕೆ ಒಂದು ಚಮಚ ಸೇವಿಸುವುದು ಕೂಡಾ ಲಾಭಕಾರಿ.

**ನಶ್ಯ :**
ಶೀತ ನೆಗಡಿ, ಕಟ್ಟಿದ ಮೂಗು ಮತ್ತು ಗಂಟಲಿಗೆ ಹಬೆಯಲ್ಲಿ ಉಸಿರಾಟ ಮಾಡುವುದರಿಂದ ಉಪಶಮನವಾಗುತ್ತದೆ. ಪಾತ್ರೆಯೊಂದರಲ್ಲಿ ಬಿಸಿ ನೀರು ತೆಗೆದುಕೊಂಡು ಅದರಲ್ಲಿ ಪುದಿನಾ ಅಥವಾ ನೀಲಗಿರಿ ತೈಲದ ಕೆಲವು ಹನಿಗಳನ್ನು ಹಾಕಿ 2-3 ನಿಮಿಷಗಳ ಕಾಲ ಉಸಿರಾಟ ಮಾಡಬೇಕು. ಮೂಗಿನಿಂದ ಉಸಿರೆಳೆದುಕೊಂಡು ಬಾಯಿಯಿಂದ ಉಸಿರನ್ನು ಬಿಡಬೇಕು. ತದನಂತರ ಮೂಗಿನ ಎರಡೂ ಹೊರಳೆಗಳಲ್ಲಿ 3-5 ಹನಿ ಅಣು ತೈಲ ಅಥವಾ ಷಡ್ಬಿಂದು ತೈಲವನ್ನು ಬಿಟ್ಟುಕೊಳ್ಳಬೇಕು. ಇದು ಶ್ವಾಸಾಂಗದ ಮೇಲ್ಭಾಗದಲ್ಲಿರುವ ವೈರಸ್ಸನ್ನು ನಾಶ ಮಾಡುತ್ತದೆ.

**ಗಂಡೂಷ – ಕವಲಗ್ರಹ :**
ಕಹಿಬೇವಿನ ಎಲೆಯ ಪೌಡರ್ 1ಗ್ರಾಂ + ಅರಿಷಿನ ಪೌಡರ್ 1 ಗ್ರಾಂ + ತುಳಸಿ ಪೌಡರ್ 1 ಗ್ರಾಂ + ಪುದಿನಾ ಪೌಡರ್ 1ಗ್ರಾಂ + ಜ್ಯೇಷ್ಠಮಧು ಪೌಡರ್ 1 ಗ್ರಾಂ- ಇವನ್ನು ಚೆನ್ನಾಗಿ ಬೆರೆಸಿ ಒಂದು ಲೋಟ ಬಿಸಿ ನೀರಿನಲ್ಲಿ ಹಾಕಿ 5 ನಿಮಿಷ ಬಿಡಿ. ಈ ನೀರು ಉಗುರುಬೆಚ್ಚಗಾದಾಗ ಅದರಿಂದ ಮುಕ್ಕಳಿಸಿ. ಈ ವಿಧಾನವು ಬಾಯಿ ಮತ್ತು ಗಂಟಲಲ್ಲಿರಬಹುದಾದ ವೈರಸ್ಸುಗಳನ್ನು ನಾಶ ಮಾಡುವಲ್ಲಿ ಸಹಕಾರಿ.

**ಧೂಮ :**
ತುಳಸಿ ಪೌಡರ್ + ಪುದಿನಾ ಪೌಡರ್ + ಬೇವಿನ ಪೌಡರ್ + ಅರಿಷಿಣ + ಶ್ರೀಗಂಧದ ಪೌಡರ್ ಇವೆಲ್ಲವನ್ನು ಸಮ ಪ್ರಮಾಣದಲ್ಲಿ ಬೆರೆಸಿ ಕೆಂಡದ ಮೇಲೆ ಉದುರಿಸಿ. ಇದರಿಂದ ಹೊರಸೂಸುವ ಧೂಮವು ಮನೆಯನ್ನು ಆವರಿಸಬೇಕು. ಈ ಪ್ರಕ್ರಿಯೆಯಿಂದ ಮನೆಯಲ್ಲಿರಬಹುದಾದ ವೈರಸ್ಸು/ವಿಷದ ಅಂಶಗಳು ನಾಶವಾಗುತ್ತವೆ.
ವಿಷ ನಾಶಕ ಜಲ : ಒಂದು ಲೀಟರ್ ನೀರು +10 ಗ್ರಾಂ ಬಡೆಸೊಪ್ಪು(ಸೋಂಫ್) + 10 ಗ್ರಾಂ ಜೀರಿಗೆ + 10 ಗ್ರಾಂ ಕೊತ್ತಂಬರಿ ಪೌಡರ್ +10 ಗ್ರಾಂ ಜ್ಯೇಷ್ಠಮಧು ಪೌಡರ್ + 5 ಗ್ರಾಂ ಶುಂಠಿ ಪೌಡರ್ + 5 ಗ್ರಾಂ ತುಳಸಿ ಪೌಡರ್ ಇವೆಲ್ಲವನ್ನೂ ಕುದಿಸಿ, ಶೋಧಿಸಿ ನಂತರ ಫ್ಲಾಸ್ಕಿನಲ್ಲಿ ತುಂಬಿಟ್ಟುಕೊಳ್ಳಿ. ಇದನ್ನು ಆಗಾಗ ಕಾಲು ಅಥವಾ ಅರ್ಧ ಲೋಟದಷ್ಟು ಕುಡಿಯುತ್ತಾ ಇರಿ.

3-5 ಗ್ರಾಂ ತ್ರಿಫಲಾ ಚೂರ್ಣವನ್ನು ರಾತ್ರಿ ಸೇವಿಸುವುದರಿಂದ ತುಸು ವಿರೇಚನವಾಗುತ್ತದೆ. ತನ್ಮೂಲಕ ಶರೀರದಲ್ಲಿರುವ ವಿಷಕಾರಿ ಅಂಶಗಳ ನಿರ್ಮೂಲನೆ ಸಾಧ್ಯ. ಹಾಗೂ ರೋಗ ಮರುಕಳಿಸುವಿಕೆಯನ್ನು ಪರೀಕ್ಷಿಸಲು ಇದು ತುಂಬಾ ಸಹಾಯಕ.

**ಸತ್ವಾವಜಯ :**
ಮಾನಸಿಕ ಸಮತೋಲನವನ್ನು ಕಾಪಾಡಿಕೊಳ್ಳಲು, ಮನೋಬಲವನ್ನು ಹೆಚ್ಚಿಸಿಕೊಳ್ಳಲು ಮತ್ತು ಖಿನ್ನತೆ, ಉದ್ವೇಗ, ಒತ್ತಡಗಳನ್ನು ನಿವಾರಿಸಿಕೊಳ್ಳಲು ಸರಿಯಾದ ಪರಾಮರ್ಷೆಯ ಅಗತ್ಯವಿರುತ್ತದೆ. ರಾತ್ರಿಯ ವೇಳೆ 1 ಗ್ರಾಂ ಬ್ರಾಹ್ಮಿ ಚೂರ್ಣವನ್ನು ಸೇವಿಸುವುದು ಮನೋಬಲವನ್ನು ಹೆಚ್ಚಿಸಿಕೊಳ್ಳಲು ಒಳ್ಳೆಯ ಉಪಾಯ.

**ಯೋಗದ ಪ್ರಭಾವ :**
ಆರೋಗ್ಯಕರ ಜೀವನವನ್ನು ನಡೆಸಲು ಭಾರತೀಯರು ಪುರಾತನ ಕಾಲದಿಂದಲೇ ಕಂಡುಕೊಂಡ ಕಲೆಯೇ ಯೋಗ. ಪತಂಜಲಿ ಋಷಿಯಿಂದ ಆವಿಷ್ಕಾರಗೊಂಡ ಅಷ್ಟಾಂಗ ಯೋಗವು ಶಾರೀರಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಅಭ್ಯಾಸಗಳನ್ನು ಒಳಗೊಂಡಿದೆ. ಯಾರು ಇದರ ಯಮ, ನಿಯಮ, ಆಸನ, ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿಗಳೆಂಬ ಮೆಟ್ಟಿಲುಗಳನ್ನು ಸರಿಯಾಗಿ ಅಭ್ಯಸಿಸುತ್ತಾರೋ ಅವರಿಗೆ ಯಾವುದೇ ರೋಗವೂ ಬರುವುದಿಲ್ಲ ಹಾಗೂ ದೀರ್ಘಾಯುಷ್ಯವನ್ನು ಹೊಂದುತ್ತಾರೆ.

ಕೋವಿಡ್ ಮಹಾಮಾರಿಯನ್ನು ದೂರವಿಡಲು ನಾವು ಶಿಕ್ಷಕರ ಮಾರ್ಗದರ್ಶನದಲ್ಲಿ ಈ ಕೆಳಗಿನ ವಿಧಾನಗಳನ್ನು ಅಭ್ಯಾಸ ಮಾಡಬಹುದು:

**ಪ್ರಾಣಾಯಾಮ:**
ಅನುಲೋಮ-ವಿಲೋಮ ಪ್ರಾಣಾಯಾಮ, ಭಸ್ತ್ರಿಕಾ, ಕಪಾಲಭಾತಿ, ಭ್ರಮರಿ, ಉಜ್ಜಾಯಿ

**ಆಸನಗಳು :**
ಸೂರ್ಯ ನಮಸ್ಕಾರ, ತಾಡಾಸನ, ತ್ರಿಕೋಣಾಸನ ಪಶ್ಚಿಮೋತ್ಥಾಸನ, ಪಾದ ಹಸ್ತಾಸನ, ಭುಜಂಗಾಸನ, ಉಷ್ಟ್ರಾಸನ, ಮಂಡೂಕಾಸನ, ನೌಕಾಸನ, ಶವಾಸನ, ಧ್ಯಾನ, ನೇತಿ, ಧೌತಿ ಕ್ರಿಯೆಗಳೂ ಕೂಡಾ ತುಂಬಾ ಪ್ರಯೋಜನಕರವಾಗಿವೆ.

**ಸರ್ವೇ ಜನಾಃ ಸುಖಿನೋ ಭವಂತು.**

# ಪುಷ್ಪಗಳ ದುಗುಡ



ಈ ದಿನ ನಾನು ದೇವರ ಪೂಜೆಗೆ ಹೂ ಕೀಳುತ್ತಿದ್ದಾಗ
ಹೂಗಳು ಸಿಡುಕಿನ ಮೋರೆಯಿಂದ ಸಂಭಾಷಿಸಿದವು
ನಿನಗೋಸ್ಕರ ನಾವಿಲ್ಲಿಲ್ಲ! ನಿನ್ನ ಸಂತೋಷಕ್ಕೆ
ಲಾಭಕ್ಕೆ ನಾವಿಲ್ಲ !
ನಾವು ಆ ದೇವನೆ ಸೃಷ್ಟಿ ರಚಿತ !
ಹಕ್ಕಿ ಜೇನ್ನೊಣಗಳನ್ನು ಆಕರ್ಷಿಸುವ ಸಲುವಾಗಿ
ದೇವನ ಉದ್ಯಾನವನ್ನು ಹಚ್ಚ ಹಸಿರಾಗಿಡಲು !
ಅಲ್ಲಾ ನಮ್ಮನ್ನು ಕಿತ್ತು ಮಾಡುವೆ
ದೇವರ ಮಂಟಪದಲ್ಲಿ ಆ ಚಿಕ್ಕ ದೇವರನ್ನೇ
ಪೂಜಿಸಿ ಕಿಂಚಿತ್ ಯೋಚನೆ ಮಾಡದೆ
ಎಸೆಯಲೇ. . . .
ನಾವೇಕೆ ನಮ್ಮ ಕೆಲಸ ಮಾಡಬಾರದು
ಏನು ಕೆಲಸ ಮಾಡಲು ನಾವು ಹುಟ್ಟಿದೆವೋ
ಅದನ್ನು ಮಾಡಲು. . . . .

ನಿನ್ನ ಕೆಲಸ ನೀ ಬದುಕಲು ಝಳಪಿಸುವುದಾದರೆ
ನಮಗೂ ಅದೇ ಅಲ್ಲವೇ
ನಾವು ಹುಟ್ಟಿಲ್ಲ ಅಥವಾ ಸ್ವಾರ್ಥವಿಲ್ಲ!
ಕೇಳು ನಿತ್ಯ ಪೂಜಿಸುವ ದೇವರು ಸತ್ತ ಹೂಗಳಿಂದ
ಸಂತುಷ್ಠನೇ; ದೇವರು ಕೊಡುವ ಉತ್ತರ
ನಿನಗೆ ಹಿತವಾಗಿರಲಿಕ್ಕಿಲ್ಲ
ಆ ಸತ್ತ ಆತ್ಮಗಳನ್ನು ಯಾರೂ ತಟ್ಟಿ
ಎಬ್ಬಿಸುವರು
ಸತ್ತು ಹೂತಮೇಲೆ ಯಾರ ಆತ್ಮ
ಎಚ್ಚರಗೊಳ್ಳುತ್ತೆ?
ಅಲ್ಲಿವರೆಗೆ ಯಾರಿಗೆ ಗೊತ್ತು
ನಿನ್ನ ಸುಳ್ಳು ಪ್ರಾರ್ಥನೆಗೆ
ನಾವೆಲ್ಲಾ ದುರ್ದೈವಿ ಬಲಿಪಶು
ಗಳಲ್ಲವೇ. .. .

***ಡಾ. ಅಹಲ್ಯಾ ಚಿಂತಾಮಣಿ***

## ಬಂಧ ಮುಕ್ತ ಪಕ್ಷಿಗಳು



ಇವರು ಚಿಣ್ಣರು, ಮುದ್ದು ಮಕ್ಕಳು, ಹೊಳೆವ ಕಂಗಳ ತುಂಟರು
ಹೊಟ್ಟೆ ತುಂಬಾ ಉಣ್ಣ ದಿದ್ದರು, ಶಾಲೆ ಕಲಿಯಲು ಕಳಸುತಿದ್ದರು
ಶಾಲೆಯಲಿ ಮಧ್ಯಾಹ್ನದೂಟ, ಸಮಯ ಕಳೆಯಲು ಆಟ ಪಾಠ
ಮಾಸ್ಟರಿಂದ ಪೆಟ್ಟು ತಿಂದರು ನೋವಿನಲ್ಲೂ ನಕ್ಕು ಬಿಡುವರು
ನೋಡ ನೋಡುತಲಿದ್ದ ಹಾಗೆ, ಎಲ್ಲರನ್ನು ಬಂದಿ ಮಾಡಿ
ದೊಡ್ಡದೊಂದು ಮಹಾಮಾರಿ, ಲೋಕದೆಲ್ಲೆಡೆ ಹರಡಿತಲ್ಲ
ಎಲ್ಲೆಡೆ ಹರಡಿದ ನೀರವ ಮೌನ
ಬೀಸುವ ಶುಭ್ರ ಗಾಳಿ, ಹರಿಯುವ ತಿಳಿ ನೀರಿನ
ಅನುಭವ ಪಡೆಯದೇ ಬಂಧಿಯಾಗಬಹುದೇ
ಕಿವಿ ತೆರೆದರೆ ಕೇಳುವುದು ಒಂದೇ ಶಬ್ದ ಕೊರೊನ, ಕೊರೊನ
ಕಣ್ಣಾರೆ ಕಂಡರೂ ಪರಾಮರ್ಶಿಸಬೇಕಂತೆ,
ದೃಷ್ಟಿಗೋಚರವಲ್ಲದ ಮಹಾಮಾರಿಗಾಗಿ ಒಳಗೆ ಇರಬೇಕಂತೆ
ಮನೆಯ ಹೊರಗೆ ಬಂದರಿವರು
ಅಪ್ಪ ಅಮ್ಮನ ಕಣ್ಣು ತಪ್ಪಿಸಿ, ಪೊಲೀಸ್ ಅಂಕಲ್ ನೋಡದಂತೆ,
ಹಾರಬೇಕು, ನಲಿಯಬೇಕು, ಗಾಳಿಯಲಿ ಲಾಗ ಹಾಕಿ
ಬಂಧ ಮುಕ್ತ ಪಕ್ಷಿಯಂತೆ, ಬಂಧ ಮುಕ್ತ ಪಕ್ಷಿಯಂತೆ

***ಪ್ರೇಮಲತಾ, ನವದೆಹಲಿ***

## ಕೊರೊನಾ

ಹೇ ಕೊರೊನಾ ಹೇ ಕೊರೊನಾ
ಬೇಡವೇ ಬೇಡವಾಗಿತ್ತು ನಿನ್ನ ಆಗಮನ
ಯಾರಿಗೂ ಗೊತ್ತಿರಲಿಲ್ಲ ನಿನ್ನ ಭಯಂಕರ
ಆಗಮನದ ಮಹಿಮಾ ॥
ಹೇ ಕೊರೊನಾ ಹೇ ಕೊರೊನಾ
ಅಂದುಕೊಂಡಿರಲಿಲ್ಲ ನಿನ್ನ ಬಗ್ಗೆ ಈ ಪರಿಯ
ಭಯಾನಕ ರೂಪ
ಕಂಡಿರಲಿಲ್ಲ, ಕೇಳಿರಲಿಲ್ಲ ಕಲ್ಪನೆಯು ಮಾಡಿರಲಿಲ್ಲ
ಈ ವಿಚಿತ್ರ ಯಮರೂಪದ ನರ್ತನ!
ಹೇ ಕೊರೊನಾ ಹೇ ಕೊರೊನಾ
ಬಡವ ಶ್ರೀಮಂತರೆನ್ನುವ ಅಂತರವ ಮರೆತು
ನೀನಾದೆ ಎಲ್ಲರ ಜೀವನಕ್ಕೆ ದಾರುಣವಾದ ಮರಣಯಾತನ ॥
ಹೇ ಕೊರೊನಾ ಹೇ ಕೊರೊನಾ
ನಡೆಯುತಿದೆ ನಿನ್ನನ್ನು ಹೊರದಾರಿ ತೋರಿಸಲು
ಶತಶತ ಪ್ರಯತ್ನ
ಸೋಲುವುದಿಲ್ಲ ನಾವು ಎಂದೆಂದಿಗೂ
ನಮ್ಮಲ್ಲಿದೆ ಹಿರಿಯರ ಮದ್ದಿನ ಖಜಾನಾ ॥
ಹೇ ಕೊರೊನಾ ಹೇ ಕೊರೊನಾ
ನೋಡುತ್ತಿರು ನೀನು ಇಲ್ಲದಿರುವಂತೆ ಮಾಡುತ್ತೇವೆ
ನಿನ್ನನ್ನು, ಇಲ್ಲದಿರುವಂತೆ ಮಾಡುತೇವೆ ನಿನ್ನನ್ನ
ನಿನಗೆ ಗೊತ್ತಿಲ್ಲ ನಮ್ಮ ಆತ್ಮಬಲ
ಸಹಿಸಿದ್ದೇವೆ ಇಂತಹ ಪರಿಯ ನೂರು ಸಲ
ಬಿದ್ದು ಎದ್ದು ನಿಲ್ಲುವ ಧೈರ್ಯ ನಮ್ಮಲ್ಲಿದೆ
ನೀ ಹೆದರಿಸಲಾರೆ ನಮ್ಮನ್ನ ನೀ ಹೆದರಿಸಲಾರೆ ನಮ್ಮನ್ನ ॥

***ಜ್ಯೋತಿ ಎಸ್. ಪೊದ್ದಾರ್***

## ಗೀತಾ ಫಡ್ನೀಸ್ ನಿಧನ

ಭಾರತ ಸರಕಾರದ ಗೃಹ ಮಂತ್ರಾಲಯದಲ್ಲಿ ಸೀನಿಯರ್ ಅಕೌಂಟೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದ ಶ್ರೀಮತಿ ಗೀತಾ ಫಡ್ನೀಸ್ (48) ಅವರು ದಿನಾಂಕ 14.06.2020ರಂದು ನಿಧನರಾಗಿದ್ದಾರೆ. ಕೆಲ ಕಾಲದಿಂದ ಅನಾರೋಗ್ಯದಿಂದ ಬಳಲುತ್ತಿದ್ದ ಅವರಿಗೆ ಹೃದಯಾಘಾತವಾಗಿತ್ತು.

ಅವರು ಪತಿ ರಾಷ್ಟ್ರಪ್ರಶಸ್ತಿ ವಿಜೇತ ಚಿತ್ರಕಲಾವಿದ ಸುಧೀರ್ ಫಡ್ನೀಸ್ ಮತ್ತು ಓರ್ವ ಪುತ್ರ ಹಾಗೂ ಬಂಧು-ಬಳಗದವರನ್ನು ಅಗಲಿದ್ದಾರೆ. ದೆಹಲಿ ಕರ್ನಾಟಕ ಸಂಘದ ಚಟುವಟಿಕೆಗಳಲ್ಲಿ ಅವರು ಭಾಗವಹಿಸುತ್ತಿದ್ದರು.

ಗೀತಾ ಫಡ್ನೀಸ್ ಅವರು ದೆಹಲಿ ಕನ್ನಡ ಶಾಲೆಯ ಹಳೆ ವಿದ್ಯಾರ್ಥಿನಿಯಾಗಿದ್ದರು.

ಅಗಲಿದ ಗೀತಾ ಫಡ್ನೀಸ್ ಅವರಿಗೆ ದೆಹಲಿ ಕರ್ನಾಟಕ ಸಂಘದ ಭಾವಪೂರ್ಣ ಶ್ರದ್ಧಾಂಜಲಿ.



## ದೆಹಲಿ ಕರ್ನಾಟಕ ಸಂಘದ ಪ್ರಕಟಣೆಗಳು

**ದೆಹಲಿ ಕನ್ನಡ ಸಂಪುಟ**
(ವಿವಿಧ ಸಾಹಿತ್ಯ)
ಪ್ರಧಾನ ಸಂಪಾದಕ : ಬೊಳುವಾರು ಮಹಮದ್ ಕುಂಞ
ಸಂಪಾದಕರು : ಸುಭಾ ಸಿನ್ನೂರ ದಾಸ್
ಚೆನ್ನು ಎಸ್. ಮಠದ
ವೆಂಕಟಾಚಲ ಹೆಗಡೆ
ಎಸ್. ಕೃಷ್ಣ ಭಟ್
ವರ್ಷ : 1994. ರೂ. 30/-

**ರಾಜಧಾನಿಯಲ್ಲಿ ಕರ್ನಾಟಕ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ಡಾ. ಪುರುಷೋತ್ತಮ ಬಿಳಿಮಲೆ
ಸಂಪಾದಕರು : ವೈ. ಅವನೀಂದ್ರನಾಥ್ ರಾವ್
ರೇಣುಕಾ ನಿಡಗುಂದಿ
ವರ್ಷ : 2006. ರೂ. 75/-

**ಸಿಡಿಲಿನ ಬಡಿತ**
**ಹಾಗೂ ಏನಿದೆ ಈ ಮುದುಕನ ಗುಟ್ಟು?**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2005. ರೂ. 50/-

**ಜರ್ನಿ ಟು ವಾರ್ಧಾ** (ಆಂಗ್ಲ ಕೃತಿ)
ಕನ್ನಡ ಮೂಲ : ಸಿದ್ದವನಹಳ್ಳಿ ಕೃಷ್ಣ ಶರ್ಮ
ಅನುವಾದ : ಎಚ್.ವೈ. ಶಾರದಾಪ್ರಸಾದ್
ವರ್ಷ : 2014. ರೂ. 100/-

**ದೇವರು ಎದ್ದು ಬಂದಾಗ**
(ನಾಟಕ)
ಮರಾಠಿ ಮೂಲ : ಡಾ. ಪು.ಲ. ದೇಶಪಾಂಡೆ
ಕನ್ನಡ ರೂಪಾಂತರ : ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ಕಿತ್ತೂರಿನ ಕೆಚ್ಚೆದೆಯ ಚೆನ್ನಮ್ಮ ರಾಣಿ**
(ನಾಟಕ)
ಎಚ್.ಎಸ್. ಕುಲಕರ್ಣಿ
ವರ್ಷ : 2014. ರೂ. 50/-

**ನಮ್ಮಿಬ್ಬರ ನಡುವೆ**
(ಕವಿತೆಗಳು)
ರೇಣುಕಾ ನಿಡಗುಂದಿ
ವರ್ಷ : 2017. ರೂ. 50/-

**ರಂಗಿನೋಕುಳಿ**
(ಕವನ ಸಂಕಲನ)
ಸವಿತಾ ಇನಾಮದಾರ್
ವರ್ಷ : 2017. ರೂ. 50/-

**ನಾನು-ನೀನು**
(ಕವನ ಸಂಕಲನ)
ಸುಧಾಕರ ಕುರಂದವಾಡ
ವರ್ಷ : 2015. ರೂ. 100/-

**ನಿರಂಜನ ಕೃತಿ ಸ್ಮೃತಿ**
**ನಿರಂಜನ ನೀಲಾಂಜನ**
(ವಿಚಾರ ಸಂಕಿರಣದಲ್ಲಿ ಮಂಡಿತ ಪ್ರಬಂಧಗಳು)
ಪ್ರಧಾನ ಸಂಪಾದಕ : ವಸಂತ ಶೆಟ್ಟಿ ಬೆಳ್ಳಾರೆ
ವರ್ಷ : 2017. ರೂ. 200/-

**ಅಕವಿತೆ**
(ಕವನ ಸಂಕಲನ)
ಡಾ. ಅಹಲ್ಯಾಚಿಂತಾಮಣಿ
ವರ್ಷ : 2017. ರೂ. 100/-



ದೆಹಲಿ ಕರ್ನಾಟಕ ಸಂಘದ
ಸುಸಜ್ಜಿತವಾದ ಆರ್ಟ್ ಗ್ಯಾಲರಿ
ಕಲಾ ಪ್ರದರ್ಶನಕ್ಕಾಗಿ ಸಿದ್ಧವಿದೆ.
ಹೆಚ್ಚಿನ ಮಾಹಿತಿಗಾಗಿ
ದೆಹಲಿ ಕರ್ನಾಟಕ ಸಂಘದ
ಕಾರ್ಯಾಲಯವನ್ನು ಸಂಪರ್ಕಿಸಿರಿ.
ದೂರವಾಣಿ :
**011–26109615 / 26104818**

ರಾಷ್ಟ್ರದ ರಾಜಧಾನಿಯಲ್ಲಿ
ಕನ್ನಡಿಗರೊಬ್ಬರ ಬಹುವರ್ಣದ
ಸುಸಜ್ಜಿತ ಮುದ್ರಣಾಲಯ
ಸೌಜನ್ಯ ಪ್ರಿಂಟಿಂಗ್ ಮತ್ತು
ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್
ಇಲ್ಲಿ ಎಲ್ಲಾ ಬಗೆಯ ಮುದ್ರಣ
ಕಾರ್ಯಗಳನ್ನು ಸಮಯಕ್ಕೆ
ಸರಿಯಾಗಿ ಅಚ್ಚುಕಟ್ಟಾಗಿ
ಮಾಡಿಕೊಡಲಾಗುವುದು.
ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್,
ಪ್ರಿಂಟಿಂಗ್ ಮತ್ತು ಬೈಂಡಿಂಗ್
ಕೆಲಸಗಳಿಗಾಗಿ ದಯವಿಟ್ಟು
ಸಂಪರ್ಕಿಸಿ

**SAUJANYA**
PRINTING PRESS
A HOUSE OF QUALITY PRINTING

Office :
C-95, Okhla Industrial Area
Phase-I, New Delhi – 110 020

Ph : 40520770
M : 9811104398, 9811604398

Delhi Karnataka Sangha Abhimata
July-2020, Vol. No.30, Issue No. 10, Price Rs.1/-
RNI Regn. No. 53405/91, DL-SW-1/4016/19-21
Date of Publication : July 8th / 9th, Posting Date :10th / 11th, Total Pages-16, Monthly-Language Kannada
Printed & Published by C.M. Nagaraja, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press C-95, Okhla Industrial Area, Phase-I, New Delhi-110020, Tel: 40520770, Editor: Dr. Avanindranath Rao Y

